# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XXIII - 2 ಫೆಬ್ರುವರಿ 2005

### ಈ ಸಂಚಿಕೆಯಲ್ಲಿ


ಅಸೋಸಿಯೇಷನ್‌ನಲ್ಲಿ :

Mysore Association meets the Governor & hands over the cheques collected for tsunami relief — 2

Annual Sports Meet — 2

Forthcoming programmes — 3

ಮೈಸೂರು ಅಸೋಸಿಯೇಷನ್ನಿನ ಬಂಗಾರ ಹಬ್ಬದ ದತ್ತಿ ಉಪನ್ಯಾಸ — 4

*Interview :*
Satavadhani Dr. R.Ganesh ● M.A.N. Prasad — 5

ಸಿ.ಡಿ.ಯಲ್ಲಿ ಸಮಗ್ರ ದಾಸ ಸಾಹಿತ್ಯ ● ದೇವು ಪತ್ತಾರ — 6

ಮೈಸೂರು ಅಸೋಸಿಯೇಷನ್ನಿನಲ್ಲಿ

ಜಿ.ಬಿ. ಜೋಶಿ ನಾಟಕೋತ್ಸವ ● ಓಂದಾಸ್ ಕಣ್ಣಂಗಾರ್ — 7

ವಿಮರ್ಶೆ:

ಜಡ ಭರತರ - ಎರಡು ನಾಟಕಗಳು ● ಡಾ. ಮಣಿಮಾಲಿನಿ ವಿ.ಕೆ. — 8

ಜಿ. ಬಿ. ಜೋಶಿ ಶತಮಾನೋತ್ಸವ ಸಂಕಿರಣ ● ಓಂದಾಸ್ ಕಣ್ಣಂಗಾರ್ — 10

ಶ್ರೀ ತ್ಯಾಗರಾಜರ ಮೇಲೆ ಶ್ರೀ ಪುರಂದರದಾಸರ ಪ್ರಭಾವ ● ಬಿ. ನಾಗಭೂಷಣ್ — 12

ಅರೆ ಶತಮಾನದ ಅಲೆ ಬರಹಗಳು ● ಕೆ.ವಿ. ಸುಬ್ಬಣ್ಣ — 13

ಸುತ್ತಮುತ್ತ — 15


**Rs. 5/-**

The Mysore Association, Mumbai

## MYSORE ASSOCIATION MEETS THE GOVERNOR & HANDS OVER THE CHEQUES COLLECTED FOR TSUNAMI RELIEF

The President and the Office bearers of The Mysore Association called on His Excellency Shri. S. M. Krishna, the Governor of Maharashtra, on 4th February 2005. Association during its Golden Jubilee year.

Our President Shri. S. Doreswamy presented a shawl and a memento to His Excellency on behalf of the Association.



*S. Doreswamy, President of The Mysore Association, Bombay presenting a shawl & memento to the Governor of Maharashtra. Along with him are Dr. H.S. Srinivas & M.A.N. Prasad.*

They explained to His Excellency the history of this organization, which will be completing eight decades shortly, and the kind of activities it has been involved in. His Excellency recalled having come to the

He also handed over to the Governor Cheques totalling Rs.56,510/- being the contributions made to the Prime Minister's National Relief Fund, by the Mysore Association as well as many of its members.



*Dr. H.S. Srinivas greeting the Governor of Maharashtra. Other members of the team S. Doreswamy, M.A.N. Prasad & H.R. Vasanth are also seen.*

## ANNUAL SPORTS MEET

Every year, the Association holds annual sports meet for its members, members' children and staff. This year this meet was held on 16th January 2005, at the N.K.E.S. School grounds at Wadala.



*Children 6 to 9 participating in balancing the book race*



*Children below 5 participating in running race.*



*Men participating in running race.*

A large number of people ranging from children below 5 years to those in their late sixties enthusiastically took part in the events.



*Women participating in lemon & spoon race.*

After completing the field events at the grounds, the entire gathering moved to the Association, where lunch had been arranged. After lunch, the concluding event



*Elders participating in lemon & spoon race.*

for the day, musical squares was held.

It was an enjoyable day for all participants and a good break from the routine of typical working day in Mumbai.



*Flag hosting on Republic Day at the Association*

# The Mysore Association, Bombay

393, Bhaudaji Road, Matunga, Mumbai - 400 019

## FORTHCOMING PROGRAMMES

on Saturday 12th February 2005 at Ground Floor lounge

**Shri Satyanarayan Pooja and Maaghi Ganapati Pooja**

5.30 p.m. Shri Satyanarayana Pooja
6.30 p.m. Maaghi Ganpati Pooja
Sahasra Nama Archane
Maha Mangalarathi Prasada Vinayoga

Members wishing to perform Sevartha should give their Name, Nakshatra and other details along with a contribution of Rs.101/- to the office.
Please do come, participate in the pooja and receive the blessings of the Lord.

On Saturday 19th February 05 at The Mysore Association Conference Hall

6.30 p.m **Bharatha Natya Concert by Baby Ananya**
9 year Ananya, studying in 4th std. at Bangalore, has already given many performances and won the admiration of audience. Ananya is the winner of Prartibha Puraskara given by Govt of Karnataka . She is the recipient of scholarship from Karnataka Sangeet Natak Akademi and the first prize in All India competition of Music and Dance held at Hyderabad.

7.45 p.m. **Prize Distribution - Annual Sports**
**Smt. Suman Chiplunkar**, (Retd.) Supt. of School B.M.C.
Has kindly consented to be the Chief Guest and give away the prizes

On Sunday 27th February, 2005 at Mysore Association, Ground Floor lounge

5.30 p.m. Mysore Association, Bombay & Mumbai Kannada Sangha
Presents
**Sri. G. V. Rangaswamy Memorial Endowment Lectures**
Sri. K. S. Hegde, Pune will speak on Bala Sahitya in Kannada
Dr. Taltaje Vasant Kumar will speak on Shatamanada Shrungagalu

7th March 05 Mysore Association Auditorium
7.00 p.m. On the eve of International Womens day
Mysore Association, Bombay
presents
Vasumathi Badrinath's
**'STREE GANAM'**
A Multi media and Musical Presentation on the women composers of Carnatic Music

8th March 05 Mysore Association Ground Floor lounge
**Shivarathri Celebrations**
6.30 p.m. Bhajans by Members
7.00 p.m. Ganapathi Pooja Prasada Vinayoga

12th March 05 Mumbai University Vidyanagari Campus
Mysore Association Fine Art Sections
Presents
**An Audio Visual on Putina's Gokula Nirgamana**

All are cordially invited

# ಮೈಸೂರು ಅಸೋಸಿಯೇಷನ್ನಿನ ಬಂಗಾರ ಹಬ್ಬದ ದತ್ತಿ ಉಪನ್ಯಾಸ ಮಾಲೆಯಲ್ಲಿ ಶತಾವಧಾನಿ ಡಾ| ಆರ್. ಗಣೇಶ್ ಅವರಿಂದ ಉಪನ್ಯಾಸ

### ಸಾರ್ವಕಾಲಿಕ ಕವಿ ಕಾಳಿದಾಸ

ಭಾರತೀಯ ಪರಂಪರೆಯಲ್ಲಿ ವ್ಯಾಸ, ವಾಲ್ಮೀಕಿ, ಅವರ ಬಳಿಕ ಇನ್ನೊಬ್ಬ ಕವಿ ಕಾಳಿದಾಸ. ಕಾಳಿದಾಸನ ಬಾರಿ ಸೊಗಸಾದ, ದಿಟ್ಟವಾದ ಹೆಜ್ಜೆ. ಅವನ ಮಾತಿನ ಪ್ರಪಂಚ ಯಾವ ಕಾಲಕ್ಕೂ ಉಳಿಯುವಂಥದ್ದು. ಕಾಳಿದಾಸ ಎಲ್ಲ ಪ್ರಾಂತ್ಯಗಳವರ ಹೃದಯ ಸಂವಾದದ ಸಾಧ್ಯತೆಯ ಕವಿ. ಬೌದ್ಧಿಕವಾಗಿ, ಭೌತಿಕವಾಗಿ, ಭಾವನಾತ್ಮಕವಾಗಿ ಅನುಭವಿಸಿದ ಕವಿ. ಅವನ ರೀತಿ ವಾಲ್ಮೀಕಿಯದ್ದು, ನೀತಿ ವ್ಯಾಸರದ್ದು. ಇಬ್ಬರ ಸಮಾಗಮ ಕಾಳಿದಾಸ. ಇಡಿಯಾಗಿ ನೋಡಿದರೂ ಸಂಪೂರ್ಣ ಬಿಡಿಯಾಗಿ ನೋಡಿದರೂ ಸಂಪೂರ್ಣ, ಭಾರತೀಯ ಹೃದಯವನ್ನು ಸುಂದರವಾಗಿ, ಸತ್ಯಯುತವಾಗಿ ಸಾರ್ವಕಾಲಿಕವಾಗಿ ದರ್ಶಿಸಿದವನು ಕಾಳಿದಾಸ. ಸಂಕ್ಷೇಪದಲ್ಲಿ ಪರಮಾರ್ಥತೆ ಹೇಳುವವನು ಕಾಳಿದಾಸ ಎಂದು ಖ್ಯಾತ ಶತಾವಧಾನಿ ಡಾ. ಆರ್. ಗಣೇಶ್ ಅಭಿಪ್ರಾಯಪಟ್ಟರು.

ಅವರು ಮೈಸೂರು ಅಸೋಸಿಯೇಷನ್‌ನಲ್ಲಿ ಮುಂಬಯಿ ವಿ.ವಿ. ಕನ್ನಡ ವಿಭಾಗದ ಸಹಯೋಗದಿಂದ ಅಸೋಸಿಯೇಷನ್‌ನ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಅಭಿಜ್ಞಾನ ಶಾಕುಂತಲಂ' ವಿಷಯದ ಕುರಿತು ಉಪನ್ಯಾಸ ನೀಡಿದರು.

ಕಾಳಿದಾಸನ 'ರಘುವಂಶ' ಪುರುಷಾರ್ಥ ಮಹಾಕಾವ್ಯ. ಬದುಕನ್ನು ಸಂಪೂರ್ಣವಾಗಿ ಗ್ರಹಿಸಿದ ಕವಿ. ಆತನ ಪ್ರಕಾರ ನಾಟಕ ಕಣ್ಣಿಗೆ ಕಾಣುವ ಯಜ್ಞ. ಎಲ್ಲ ದಾನಕ್ಕಿಂತಲೂ ಮಿಗಿಲಾದುದು ಸಂತೋಷ ದಾನ. ಇದನ್ನು ನಾಟಕ ನೀಡುತ್ತದೆ. ಭಾರತೀಯ ನಾಟಕ ಪರಂಪರೆ ಸಾಂಕೇತಿಕವಾದುದು. ನಾಟ್ಯಶಾಸ್ತ್ರದ ಸಂಪೂರ್ಣ ದರ್ಶನ ಯಕ್ಷಗಾನದಲ್ಲಿದೆ. ಕಾವ್ಯ ಪ್ರಪಂಚದಲ್ಲಿ ಉಪಮೆಗಳನ್ನು ಪರಿಪೂರ್ಣವಾಗಿ ನೀಡಿದ ಕವಿ ಕಾಳಿದಾಸ ಎಂದು ಡಾ. ಗಣೇಶ್ ನುಡಿದರು. ಪದ್ಮನಾಭ ಸಿದ್ಧಕಟ್ಟೆ ಸ್ವಾಗತಗೀತೆ ಹಾಡಿದರು. ಅಸೋಸಿಯೇಷನ್ ಉಪಾಧ್ಯಕ್ಷ ಡಾ. ಎಚ್. ಎಸ್. ಶ್ರೀನಿವಾಸ ಸ್ವಾಗತಿಸಿದರು. ಡಾ. ತಾಳ್ತಜೆ ವಸಂತಕುಮಾರ್ ಪ್ರಸ್ತಾವನೆಗೈದರು. ಡಾ. ಜಿ.ಎನ್. ಉಪಾಧ್ಯಕ್ಷ ಕಾರ್ಯಕ್ರಮ ನಿರೂಪಿಸಿದರು. ಎಂ.ಎ.ಎನ್. ಪ್ರಸಾದ್ ವಂದಿಸಿದರು.




ಮೈಸೂರು ಅಸೋಸಿಯೇಷನ್ ಸುವರ್ಣ ಮಹೋತ್ಸವದ ದತ್ತಿ ಉಪನ್ಯಾಸ ಸಂದರ್ಭದಲ್ಲಿ ಉಪನ್ಯಾಸಕಾರರಾದ ಡಾ. ಗಣೇಶ್ ಮತ್ತು ಡಾ. ತಾಳ್ತಜೆ ವಸಂತಕುಮಾರ್, ಡಾ. ಎಚ್. ಎಸ್. ಶ್ರೀನಿವಾಸ್ ಮತ್ತು ಎಮ್.ಎ.ಎನ್. ಪ್ರಸಾದ್




ಉಪನ್ಯಾಸಕರಾದ ಡಾ. ಗಣೇಶ್ ಅವಧಾನಿಗಳನ್ನು ಅಸೋಸಿಯೇಶನಿನ ಅಧ್ಯಕ್ಷರಾದ ಮೋರೆಸ್ವಾಮಿಯವರು ಸ್ಮರಣಿಕೆಯನ್ನು ಕೊಟ್ಟು, ಸನ್ಮಾನಿಸುತ್ತಿರುವುದು. ಪಕ್ಕದಲ್ಲಿ ಡಾ. ತಾಳ್ತಜೆ ವಸಂತಕುಮಾರ್.

FOR ALL YOUR DOMESTIC AND INTERNATIONAL TRAVEL ARRANGEMENTS

CONTACT

AUGUST TRAVEL SERVICE

Agents For INDIAN AIRLINES & JET AIRLINES

2/16, KABBUR HOUSE,
SION (E),
MUMBAI-400 022.
PHONES : 2407 2984·2409 3573
2407 7750

*Interview*

# Satavadhāni Dr. R.Ganesh

*- M.A.N. Prasad*

I have not had the opportunity of witnessing a Astavadhana or Satavadhana performance. But, the amazing things I had heard that these persons could do had always fascinated me. So, when Dr. R. Ganesh came to Mumbai for delivering lectures under our Mysore Association Golden Jubilee Endowment Lecture series, I asked him if I could interview him about this. Dr. Ganesh was kind enough to readily agree. However, getting him free after the lectures was not easy, as he was flocked by enthusiastic listeners expressing their appreciation or asking him questions, etc. I could get some of his time by picking him up from the guesthouse and taking him to the airport. During this half or three quarter of an hour, he shared a lot of information on subject. Though the interview was in Kannada, I am writing this in English so that a larger number of our readers can know about this rare art.

**Nesaru** - What is Satavadhana?

**Dr.Ganesh** - Avadhana means placing or focussing our attention. Astavadhana is focussing or concentrating on 8 different things. Similarly Satavadhana is focussing or concentrating on 100 different things. It is a literary exercise or gymnastics and calls for a lot of erudition. If we call it an art it should be related to an art form. It entails a lot of wit and an element of wonder. It is not a show or entertainment meant for masses or large gatherings. It is entertainment meant for a small group of literate folks. What started as a literary exercise initially, gained sophistication in the later years in the royal courts and under royal patronage.

**Nesaru** - How old is this art? And where all it flourished?

**Dr.Ganesh** - If we go by a full-fledged, descriptive and documented history, this art is about 800 years old. Its origin can be traced even before Vatsayana's Kamasutra (approximately 300 A.D.) Possibly it was prevalent earlier, but we have nothing to indicate that. It was in vogue in Karnataka, Tamil Nadu and Andhra Pradesh. Today it is doing well in Andhra Pradesh, as there is a better awareness there and also the avadhanis command a good social standing in that state. Even in the jain tradition of North India, this art is practiced in a different way.

**Nesaru** - What are its key features?

**Dr.Ganesh** - It has three main components - Poorana, Dhaarana and Sabha Ranjana. Poorana is completing the tasks, Dhaarana is recalling the completed tasks and Sabha Ranjana consists of active and lively presentation of the show so that it is entertaining and an element of wonder and amazement surrounds these literary feats. The performance should give the impression of being done effortlessly, though it may call for considerable effort on the part of the performer.

**Nesaru** - Could you describe the contents of a typical Astavadhana or Satavadhana ?

**Dr.Ganesh** - Yes. Let's take a Sahityavadhana, which is the main one among the various branches of the art of Astavadhana. The person who performs is the Avadhani. In Astavadhana eight people surround him and quiz him. The general pattern is as follows *:

(* There are a few other items of choice. But, this is the general format of eight items. Usually, instead of chitrakavita (ಚಿತ್ರ ಕವಿತಾ) - which is the most difficult item and R. Ganesh is the only person performing this and he himself has introduced this — ವ್ಯಸ್ತಾಕ್ಷರಿ / ವರ್ಣನಾ / ಅನ್ಯಭಾಷಾಸಮಸ್ಯಾ etc. are opted.)

**1. Nishedaakshara** (ನಿಷೇಧಾಕ್ಷರ) - here the Avadhani has to compose a poem in a specified metre on the given topic and it should not contain the alphabets announced by the quizzers. For example, lets say the first quizzer says 'cha' (ಚ), then the Avadhani cannot use that letter and lets say he starts with 'ga' (ಗ), now the next quizzer, anticipating that he may use the word Ganapati will say 'na' (ನ). Since he cannot use 'na' the Avadhani will say ja (ಜ). Anticipating he might use the word gajamukha, the next quizzer will block the letter 'mu' (ಮು) and the Avadhani will circumvent this by saying 'va' (ವ) for making the word gajavadana. This process will continue. The Avadhani will have to compose a stanza under these constraints.


**2. Samasya poorana** (ಸಮಸ್ಯಾಪೂರಣ) - here the last line of a four-line metrical poem is given. This given line by itself does not make sense and is inapt or redundant or has contradictory statements. The Avadhani has to compose the first three lines in such a way that with this given fourth line the poem makes sense. For example, lets consider a given last line as ಮಾಡದ ಮಾಡುವುದೆ ಧೀರ ಸಜ್ಜನರ ಗುಣ. Look at the contradictions in that line and how it does not make any sense. One of the solutions is for the Avadhani to end his third line with the word ತಪ. Then this makes sense, as it will read ತಪ ಮಾಡದೆ ಮಾಡುವುದೆ ಧೀರಸಜ್ಜನರ ಗುಣ.

**3. Dattapadi** (ದತ್ತಪದಿ) - here 4 words, a topic and a metre is given to the Avadhani. He has to make a poem on the topic given, using those 4 words, which generally have nothing to do with the topic, confining to the metre specified. Let me give you an example. Lets consider four words like Nirma, Wheel, Rin and Surf, the name of four brands of detergents and the topic as Draupadi's appeal to Lord Krishna for help when she was being disrobed. See how unconnected are the names of detergents from the topic. The Avadhani meets the stringent requirements with a poem like this:

ಸಭೆ ಇದು ನಿರ್ಮಾನುಷ್ಯೆ,
ಶುಭಚರಿತರಾರು ವಿಲ್ಲ್ ವಿ ಬಲರಾಯರ ನಡುವೊಳ್
ಪ್ರಭುಮಾರ್ರಿನ್ ಎನಗಿನ್ನೇ
ವಿಭು! ದಾಸ್ಸರ್ಫ್‌ಗಳ್ಗಾದರ್ ಒದೆದವರ್

**4. Chitrakavite** (ಚಿತ್ರಕವಿತೆ) - here the Avadhani has to not only compose a poem but ensure that it fits into a floral pattern or sketch. Each line of the poem is generally fitted into a sketch. For Example, here is a line which could be written like this:

ಕಲಾ ಕಲಾಪ ಕಲಾಜಾಣಂ ನವೀನ ವೀಣ ವಿಚಿತಂ ಎಂಬುದನ್ನು ಈ ರೀತಿ ಚಿತ್ರಿಸಬಹುದು



(This is only one line in a poem of four lines. All the four lines are to be composed like this)

This particular form, is known as ಬಂಧ ಚಿತ್ರ and the specific form is known as ಪುಷ್ಪಗುಚ್ಛ ಬಂಧ.

There could be many variations in this, by imposing conditions. Avadhani could be asked to use only 2 or limited alphabets (ವರ್ಣ ಚಿತ್ರ), the graphic to read from left to right or from right to left and so on (ಗತಿ ಚಿತ್ರ), multiple meaning (ಶ್ಲೇಷ ಚಿತ್ರ). etc. These are some of the different types of ಚಿತ್ರಕವಿತಾ.

**5. Ashukavitva** (ಆಶುಕವಿತ್ವ) - here the Avadhani is asked to compose poems extempore. There will be four such rounds. The thrust is on spontaneity and speed. He

should recite his poem like a poem he has read before and not as one he is just thinking out and composing.

**6. Kavya Vachana** (ಕಾವ್ಯ ವಾಚನ) - here the quizzers will read out a passage of a classic and the Avadhani has to identify the source, the situation and comment on the same.

**7. Aprasthuta Prasanga** (ಅಪ್ರಸ್ತುತ ಪ್ರಸಂಗ) - Here, amidst a task assigned to he Avadhani, the quizzers will do a rapid fire of irrelevant, unconnected questions. The Avadhani has to answer these, while completing the task. For example questions like " what is the difference between marriage and garage? could be posed. The presence of mind, wit and sense of humour are important here.

**8. Sankhyabandha or Ghantaganana** (ಸಂಖ್ಯಬಂಧ ಅಥವ ಘಂಟಾಗಣನ) -here the Avadhani is asked to solve a magic square in sankhyabandha or keep a count of the number of times the bell chimed during the course of the Astavadhana.

Each of these eight Avadhanas is a course of four rounds. At the end of these rounds, the Avadhani recalls and recites the output of all these rounds by memory. The quizzers would have noted down what he said or composed at each step and would compare what he recalls with their notes to check if it is correct.

Normally such a demonstration would take about 3 hours. Satavadhana is similar, but has 100 items posed by ಪೃಚ್ಛಕ - the questioning scholar, instead of 8 items here. A Satavadhana demonstration will take about 3 days.

**Nesaru** - How prevalent is this art?

**Dr.Ganesh** - It has always been an art of very few. There are very few people pursuing this art.

**Nesaru** - How small would this number be in your estimate, about 1,000?

**Dr.Ganesh** - No, much smaller than that. Perhaps a 100 at the most.

**Nesaru** - is this heading towards extinction?

**Dr.Ganesh** - It will certainly not go out in Andhra Pradesh. There, some how a better awareness has been created and many people are learning this art. Society gives a place of honour to these Avadhanis there. But in other places, I can't say. This art never flourished even in the olden days. Possibly because it never gave big returns for the kind of effort involved.

**Nesaru** - What are the similarities between this and lateral thinking?

**Dr.Ganesh** - there is a lot common to both, particularly in samasyapoorana etc. However, this is more complex than lateral thinking because, the kind of disturbances that have to be overcome here are not there in lateral thinking, unless one considers the other thoughts themselves as he disturbances. But here various external disturbances are brought in with the purpose of challenging the concentration or thought process.

It is essential that the Avadhani keeps a cheerful disposition and does not allow the disturbing factors to irritate him.

**Nesaru** - Could this technique be useful or harnessed to improve one's mental abilities

**Dr.Ganesh** - I do not think so. This does not confer any better features than what could be got through study of literature, philosophy, arts or science. The effort involved is vast and no short cuts are there. Some feel that this should be reworked to suit the present day needs. But then, that is a new field by itself.

**Nesaru** - thanks a lot Dr. Ganesh

Readers interested in further details / information on the subject may kindly refer to Dr. R.Ganesh's Doctoral Thesis published as ಕನ್ನಡದಲ್ಲಿ ಅವಧಾನ ಕಲೆ "or contact Dr.R.Ganesh at:
**Dr.R.Ganesh** 1250 (30), IV Main,
E Block, II Stage,
Rajaji Nagar, Bangalore - 560 010
Phone : 080 - 2342 0628

# ಸಿ.ಡಿ.ಯಲ್ಲಿ ಸಮಗ್ರ ದಾಸ ಸಾಹಿತ್ಯ

- ದೇವು ಪತ್ತಾರ

**ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ತನ್ನ ಕಾರ್ಯಕ್ಷೇತ್ರ ವಿಸ್ತರಿಸಿಕೊಂಡಿದ್ದು ಸಮಗ್ರ ದಾಸ ಸಾಹಿತ್ಯವನ್ನು ಕಾಂಪ್ಯಾಕ್ಟ್ ಡಿಸ್ಕ್ ರೂಪದಲ್ಲಿ ಹೊರತಂದಿದೆ. ಕಂಪ್ಯೂಟರಿನ 37 ಎಂ.ಬಿ. (ಮೆಗಾ ಬೈಟ್) ಸ್ಥಳ ತೆಗೆದುಕೊಳ್ಳುವ ಕನಿಷ್ಠ ಇನ್‌ಸ್ಟಾಲೇಷನ್‌ನಿಂದ ಧ್ವನಿಮುದ್ರಿತ ಹಾಡುಗಳನ್ನು ಹೊರತುಪಡಿಸಿ ಸಂಪೂರ್ಣ ದಾಸ ಸಾಹಿತ್ಯ ದೊರೆಯುತ್ತದೆ. ಧ್ವನಿ ಮುದ್ರಿತ ಹಾಡುಗಳೂ ಸೇರಿ ಎಲ್ಲವನ್ನೂ ಕಂಪ್ಯೂಟರ್‌ನಲ್ಲಿ ಇನ್‌ಸ್ಟಾಲ್ ಮಾಡುಕೊಳ್ಳುವುದಕ್ಕೆ 370 ಎಂ.ಬಿ. ಸ್ಥಳಾವಕಾಶದ ಅಗತ್ಯವಿದೆ.**

ಅತ್ಯಾಧುನಿಕ ಸಾಫ್ಟ್‌ವೇರ್ ಬಳಸಿ 'ಕನ್ನಡ ಸಾಹಿತ್ಯ'ವನ್ನು ಸಾರ್ವಜನಿಕರಿಗೆ ಸುಲಭವಾಗಿ ತಲುಪಿಸುವ ಕಾರ್ಯ ತಡವಾಗಿಯಾದರೂ ಆರಂಭವಾಗಿದೆ. ಇದುವರೆಗೆ ಪುಸ್ತಕ ಪ್ರಕಟಣೆ ಮತ್ತು ಧ್ವನಿಸುರುಳಿ ನಿರ್ಮಾಣಕ್ಕೆ ಮಾತ್ರ ತನ್ನ ಕಾರ್ಯಕ್ಷೇತ್ರವನ್ನು ಸೀಮಿತಗೊಳಿಸಿಕೊಂಡಿದ್ದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಈಗ 'ಸಮಗ್ರ ದಾಸ ಸಾಹಿತ್ಯ' ಸಿ.ಡಿ. ರೂಪದಲ್ಲಿ ಹೊರತಂದಿದೆ.

ಎಂಎಸ್‌ಐಎಲ್ ಸಂಸ್ಥೆ ಈ ಸಿ.ಡಿ. ನಿರ್ಮಾಣದ ನಿರ್ವಹಣೆ ಮಾಡಿದೆ. ಅತ್ಯಾಧುನಿಕ ಸಾಫ್ಟ್‌ವೇರ್ ಬಳಸಿ ನಿರ್ಮಾಣವಾಗಿರುವ ಈ ಕಾಂಪ್ಯಾಕ್ಟ್ ಡಿಸ್ಕ್‌ನಲ್ಲಿ 144 ದಾಸರ ಒಟ್ಟು 16,337 ಕೀರ್ತನೆಗಳಿವೆ. ಅವುಗಳಲ್ಲಿ ಗಾಯಕರಿಂದ ಹಾಡಿಸಿ ಧ್ವನಿ ಮುದ್ರಿಸಿಕೊಂಡ 502 ಹಾಡುಗಳಿವೆ.

ಸ್ವಂತ ಕಂಪ್ಯೂಟರ್ ಹೊಂದಿರುವವರಿಗೆ, ಗ್ರಂಥಾಲಯಗಳಿಗೆ ಅಪೂರ್ವ ಸಂಗ್ರಹಯೋಗ್ಯ ಸಿ.ಡಿ. ಇದಾಗಿದೆ. ಸಮಗ್ರ ದಾಸ ಸಾಹಿತ್ಯದ ಸಿ.ಡಿ.ಯನ್ನು ನಿಮ್ಮ ಕಂಪ್ಯೂಟರಿನ ಸಿ.ಡಿ. ಡ್ರೈವ್‌ನಲ್ಲಿ ಹಾಕಿದ ತಕ್ಷಣ ಸ್ವಯಂಚಾಲನೆಗೊಂಡು ಸಂಬಂಧಿಸಿದ ಸಾಫ್ಟ್‌ವೇರ್ ಮತ್ತು ಫಾಂಟ್‌ಗಳನ್ನು ಸ್ಥಾಪಿಸಲು ಸೂಚಿಸುತ್ತದೆ. ಅದರಲ್ಲಿ ಕನಿಷ್ಠ ಇನ್‌ಸ್ಟಾಲೇಷನ್ ಮತ್ತು ಸಂಪೂರ್ಣ ಇನ್‌ಸ್ಟಾಲೇಷನ್ ಎಂಬ ಎರಡು ವಿಭಾಗಗಳಿವೆ. ನಿಮ್ಮ ಕಂಪ್ಯೂಟರಿನ 37 ಎಂ.ಬಿ. (ಮೆಗಾ ಬೈಟ್) ಸ್ಥಳ ತೆಗೆದುಕೊಳ್ಳುವ ಕನಿಷ್ಠ ಇನ್‌ಸ್ಟಾಲೇಷನ್‌ನಿಂದ ಧ್ವನಿಮುದ್ರಿತ ಹಾಡುಗಳನ್ನು ಹೊರತು ಪಡಿಸಿ ಸಂಪೂರ್ಣ ದಾಸ ಸಾಹಿತ್ಯ ದೊರೆಯುತ್ತದೆ. ಧ್ವನಿ ಮುದ್ರಿತ ಹಾಡುಗಳೂ ಸೇರಿ ಎಲ್ಲವನ್ನೂ ನಿಮ್ಮ ಕಂಪ್ಯೂಟರಿನಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳುವುದಕ್ಕೆ 370 ಎಂ.ಬಿ. ಸ್ಥಳಾವಕಾಶದ ಅಗತ್ಯವಿದೆ.

ಇನ್‌ಸ್ಟಾಲ್ ಮಾಡಿದ ನಂತರ ಬರುವ ಹೋಮ್‌ಪೇಜ್ ಮಾದರಿಯ ಪುಟದ ಎಡಗಡೆಯಲ್ಲಿ 'ಮುಖಪುಟ', 'ಎರಡು ಮಾತು', 'ಪ್ರಕಾಶಕರ ಮಾತು', 'ಸಂಪಾದಕ ಮಂಡಳಿ'ಯ ವಿವರಗಳಿಗೆ ಲಿಂಕ್ (ಸಂಪರ್ಕ) ಕಲ್ಪಿಸಲಾಗಿದೆ. ಬಲಭಾಗದಲ್ಲಿ ಪ್ರಾರಂಭ ಹರಿದಾಸರು 'ಶಬ್ದಾರ್ಥ', 'ಹುಡುಕುವಿಕೆ', 'ಹಾಡುಗಳು', ಎಂಬ ಲಿಂಕ್‌ಗಳಿವೆ.

'ಹರಿದಾಸರು' ಆಯ್ಕೆಯ ಮೇಲೆ ಕ್ಲಿಕ್ ಮಾಡಿದರೆ ಅಕಾರಾದಿಯಲ್ಲಿರುವ ಎಲ್ಲ 144 ದಾಸರ ಹೆಸರುಗಳು (ಎರಡು ಪುಟ) ಪರದೆಯ ಮೇಲೆ ಮೂಡುತ್ತವೆ. ನಿಮಗೆ ಬೇಕಾದ ದಾಸರ ಹೆಸರಿನ ಮೇಲೆ ಕ್ಲಿಕ್ ಮಾಡಿದರೆ, ದಾಸರಿಗೆ ಸಂಬಂಧಿಸಿದ ವಿವರಗಳು ಮತ್ತು ಅವರ ಕೀರ್ತನೆಗಳಿಗೆ ಸಂಪರ್ಕ (*ಪುಟ 11ಕ್ಕೆ*)

# ಮೈಸೂರು ಅಸೋಸಿಯೇಷನ್ನಿನಲ್ಲಿ ಜಿ.ಬಿ. ಜೋಶಿ ನಾಟಕೋತ್ಸವ

- ಓಂದಾಸ್ ಕಣ್ಣಂಗಾರ್

ನಾಟಕ ಅಥವಾ ಸಾಹಿತ್ಯ, ಸಂಸ್ಕೃತಿ ಒಳ್ಳೆಯದನ್ನು ಬಯಸುವಂತಹದ್ದು. ಒಳ್ಳೆಯ ನಾಟಕದ ಮೂಲಕ ಸಮಾಜವನ್ನು ತಿದ್ದಬಹುದು. ಅದನ್ನು ಮನಗಂಡವರು ಜಿ.ಬಿ. ಜೋಶಿಯವರು. ಅವರು ನಾಟಕ ಸಾಹಿತ್ಯದ ಒಟ್ಟಿಗೆಯೇ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ್ದಾರೆ. ಅವರನ್ನು ನೆನಪಿಸುವಂತಹ ಈ ನಾಟಕೋತ್ಸವ ನಿಜವಾಗಿಯೂ ಅರ್ಥಪೂರ್ಣವಾಗಿದೆ ಎಂದು ಕರ್ನಾಟಕ ಮಲ್ಲದ ಸಂಪಾದಕರಾದ ಚಂದ್ರಶೇಖರ ಪಾಲೆತ್ತಾಡಿ ಹೇಳಿದರು.

ಅವರು ಜಿ.ಬಿ. ಜೋಶಿ ಶತಮಾನೋತ್ಸವ ಸಮಿತಿ ಮುಂಬಯಿ ಹಾಗೂ ಮೈಸೂರು ಮಾಟುಂಗ ಪೂರ್ವದ ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಜಂಟಿಯಾಗಿ ಆಯೋಜಿಸಿದ ಜಿ.ಬಿ. ಜೋಶಿ ನಾಟಕೋತ್ಸವವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂಬಯಿ ಕನ್ನಡಿಗರು ಜಿ.ಬಿ. ಜೋಶಿ ಅವರನ್ನು ಎಂದೂ ಮರೆಯಲಾರರು ಎಂಬುದಕ್ಕೆ ಇಂದು ಇಲ್ಲಿ ನಡೆಯುತ್ತಿರುವ ಈ ನಾಟಕೋತ್ಸವವೇ ಸಾಕ್ಷಿ ಎಂದ ಪಾಲೆತ್ತಾಡಿ, ಮೂರು ದಿನಗಳ ಕಾಲ ನಡೆಯುವ ನಾಟಕೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಯಲಿ ಎಂದು ಆಶಿಸಿದರು. ಪ್ರಾಸ್ತಾವಿಕ ಭಾಷಣ ಮಾಡಿದ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತಕುಮಾರ್ ಅವರು, ಸಂಸ್ಕೃತಿಯ ಪರಿಚಾರಿಕೆಯ ಕೆಲಸಗಳನ್ನು ಜಿ.ಬಿ. ಜೋಶಿಯವರು ಅರ್ಥಪೂರ್ಣವಾಗಿ ಮಾಡಿದ್ದಾರೆ. ನಾಟಕಕಾರರಾಗಿ ಇತರ ಸಾಹಿತಿಗಳ, ಕಲಾವಿದರ ಅಭಿವೃದ್ಧಿಗಳನ್ನು ಚಿಂತಿಸುತ್ತಿದ್ದ ಒಬ್ಬ ವ್ಯಕ್ತಿಯ ನೆನಪು ಮಾಡಿಕೊಳ್ಳುತ್ತಿರುವುದು ಅರ್ಥಪೂರ್ಣ ಎಂದು ನುಡಿದರು.

ಚಂದ್ರಶೇಖರ ಪಾಲೆತ್ತಾಡಿ, ಡಾ. ತಾಳ್ತಜೆ ವೇದಿಕೆಯಲ್ಲಿ ಉಪಸ್ಥಿತರಿದ್ದ ರಮಾಕಾಂತ ಜೋಶಿ, ಮೋಹನ್ ನಾಯ್ಕ್ ಅವರನ್ನು ಮೈಸೂರು ಅಸೋಸಿಯೇಶನ್ ಗೌರವ ಕಾರ್ಯದರ್ಶಿ ಎಂ.ಎ.ಎನ್. ಪ್ರಸಾದ್ ಪುಷ್ಪಗುಚ್ಛ ನೀಡಿ ಸತ್ಕರಿಸಿದರು.


ಕಾರ್ಯಕ್ರಮವು ಶ್ರೀಮತಿ ಪುಷ್ಪಾ ರಾವ್ ಹಾಗೂ ಶ್ರೀಮತಿ ಶ್ಯಾಮಲಾ ಅವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ಎಂ.ಎ.ಎನ್. ಪ್ರಸಾದ್ ಸ್ವಾಗತಿಸಿದರು. ರಂಗಕಲಾವಿದೆ (ಪುಟ 9ಕ್ಕೆ)



ಜಿ. ಬಿ. ಜೋಶಿ ನಾಟಕೋತ್ಸವವನ್ನು ಚಂದ್ರಶೇಖರ ಪಾಲೆತ್ತಾಡಿ ದೀಪ ಪ್ರಜ್ವಲಿಸಿ ಉದ್ಘಾಟಿಸುತ್ತಿರುವುದು. ಜೊತೆಯಲ್ಲಿ ರಮಾಕಾಂತ ಜೋಶಿ, ತಾಳ್ತಜೆ ವಸಂತಕುಮಾರ್, ಮ.ಅ.ನಾ. ಪ್ರಸಾದ್ ಮತ್ತು ಭಾರತಿ ಪ್ರಸಾದ್




ಚಂದ್ರಶೇಖರ ಪಾಲೆತ್ತಾಡಿಯವರಿಗೆ ಪುಷ್ಪಗುಚ್ಛ ಕೊಟ್ಟು ಸನ್ಮಾನಿಸುತ್ತಿರುವುದು.



ಜಿ. ಬಿ. ಜೋಶಿ ನಾಟಕೋತ್ಸವದ ಸಂದರ್ಭದಲ್ಲಿ ಏರ್ಪಡಿಸಿದ ಅವರ ಜೀವನ ಗಾಥೆಯ ಕ್ಷಣ ಚಿತ್ರಗಳ ಪ್ರದರ್ಶನ ಹಾಗೂ ಮನೋಹರ ಗ್ರಂಥ ಮಾಲೆಯಿಂದ ಪ್ರಕಾಶಿತವಾದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಲಾಗಿತ್ತು

ವಿಮರ್ಶೆ


# ಜಡ ಭರತರ - ಎರಡು ನಾಟಕಗಳು

- ಡಾ. ಮಣಿಮಾಲಿನಿ ವಿ.ಕೆ.



'ಕದಡಿದ ನೀರು' ನಾಟಕದ ಒಂದು ದೃಶ್ಯ

ಸಮರ್ಥವಾದ ನಿರ್ದೇಶನ, ಪ್ರತಿಭಾವಂತರಾದ ಕಲಾವಿದರು, ಶಕ್ತಿಶಾಲಿ -ಸಂಭಾಷಣೆಗಳು, ಪ್ರಭಾವಿಯಾದ ವಸ್ತು, ಸಾಮಾಯಿಕ ಮೌಲ್ಯಗಳೆಲ್ಲವೂ ಸಂಕೀರ್ಣ ಕಲೆಯಾದ ನಾಟಕದ ಬಂಡವಾಳಗಳಾಗಿವೆ. ಇವೆಲ್ಲವುಗಳ ಸಮರ್ಪಕವಾದ ಸಮಯೋಜನೆ



ಧಾರವಾಡದ ಕಲೋದ್ಧಾರಕ ಸಂಘದವರಿಂದ ಪ್ರಯೋಗಗೊಂಡ 'ಕದಡಿದ ನೀರು' ನಾಟಕದ ಒಂದು ದೃಶ್ಯ

ಯಿದ್ದಾಗ, ಈ ದೃಶ್ಯ ಮಾಧ್ಯಮವು ತುಂಬ ಯಶಸ್ವಿಯಾಗುತ್ತದೆನ್ನುವುದಕ್ಕೆ ಇತ್ತೀಚೆಗೆ ಮೈಸೂರು ಅಸೋಸಿಯೇಷನ್ನಿನ ಸಭಾಗೃಹದಲ್ಲಿ ಪ್ರದರ್ಶಿತವಾದ, ಜಿ.ಬಿ. ಜೋಶಿಯವರ 'ಕದಡಿದ ನೀರು' ಮತ್ತು 'ಸತ್ತವರ ನೆರಳು' ನಾಟಕಗಳು ಸಾಕ್ಷಿಗಳಾಗಿವೆ.

ಜಿ.ಬಿ. ಜೋಶಿ ಶತಮಾನೋತ್ಸವ ಸಮಿತಿ, ಮುಂಬಯಿ, ಮೈಸೂರು ಅಸೋಸಿಯೇಶನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಎಂ.ಎಸ್.ಐ.ಎಲ್. ಇವರ ಸಂಯುಕ್ತ ಪ್ರಾಯೋಜಕತ್ವದಲ್ಲಿ ಆಯೋಜಿತವಾದ 'ಜಿ.ಬಿ. ಜನ್ಮ ಶತಮಾನೋತ್ಸವ'ದ ಅಂಗವಾಗಿ ಈ ಎರಡು ನಾಟಕಗಳು ರಂಗಪ್ರಯೋಗ ಗೊಂಡಿದ್ದುವು.

'ಕದಡಿದ ನೀರು' ಇದು ೧೯೬೦ರಲ್ಲಿ ರಚಿತವಾದ ನಾಟಕವಾಗಿದೆ. ಸ್ವಾತಂತ್ರ್ಯೋತ್ತರದ, ಆದರ್ಶವಾದ ನೆಲೆಯ ನಿರೀಕ್ಷೆಗಳು ಮತ್ತು ವಾಸ್ತವ ಜಗತ್ತಿನ ಪ್ರತ್ಯಕ್ಷ - ಪರೋಕ್ಷ ಕ್ರೌರ್ಯಗಳು ಸಂಧಿಸಿದಾಗ ನಡೆಯುವ ಸಂಘರ್ಷವೇ ಇದರ ವಸ್ತುವಾಗಿದೆ. ಸ್ವಾತಂತ್ರ್ಯ ಹೋರಾಟಗಾರನಾಗಿದ್ದ ಶಿವಪ್ಪನ ಅಹಿಂಸಾತ್ಮಕ ಧೋರಣೆ, ಅವನ ಮಗನಾದ, ಹೊಸ ತಲೆಮಾರಿನ ಶಂಕರನ ಮೌಲ್ಯಸಂಹಿತಿ ಹಾಗೂ ಸಮಕಾಲೀನ ಜಗತ್ತಿನ ಅಮಾನವೀಯತೆಯ ಸಂಕೇತವಾದ ಗೂಳಪ್ಪನ ಶೋಷಕ ವೃತ್ತಿಗಳು ಇಲ್ಲಿ ಪ್ರತಿನಿಧಿಸಲ್ಪಟ್ಟಿವೆ. ಇವುಗಳೊಂದಿಗೆ ಸ್ವಸಾಮರ್ಥ್ಯ ದಲ್ಲಿ ವಿಶ್ವಾಸವಾಗಲಿ. ಏನನ್ನಾದರೂ ಸಾಧಿಸುವ ಮನೋದ್ದೈಹಿಕ ಬಲಗಳಾಗಲಿ ಇಲ್ಲದಿದ್ದರೂ, ಆತ್ಮಪ್ರಶಂಸೆಯ ಬಗ್ಗದೊಳಗಿರುತ್ತ, ಮಿಥ್ಯೆಗಳಲ್ಲಿ ಬದುಕುವ ದುರ್ಬಲ ಪಾತ್ರವೂ ಇದೆ. ಒಂದು ಹಂತದವರೆಗೂ 'ಜಾಗೃತ ಮಹಿಳೆ'ಯ ಹೊಸ ಮಾದರಿಯಾಗಿ ನಿಲ್ಲುವ ಶಿವಪ್ಪನ ಮಗಳ ಪಾತ್ರವಿದೆ.

ಲವಲವಿಕೆಯ ನಟನೆ, ಪ್ರಾದೇಶಿಕ ಭಾಷಾ ಪ್ರಯೋಗಗಳಲ್ಲಿದ್ದ ಸಹಜತೆ, ಸರಳವಾದ ರಂಗ ಪರಿಕರಗಳು ಈ ನಾಟಕದ ಸಂವಹನ ಸಾಧ್ಯತೆಗಳನ್ನು ಹೆಚ್ಚಿಸಿದ ಅಂಶಗಳಾಗಿವೆ. ಅದರಲ್ಲೂ ರಂಗದ ಮೇಲಿನ ಕ್ರಿಯೆಗಳಿಗೆಲ್ಲ ತಕ್ಷಣದ ಪ್ರತಿಕ್ರಿಯೆಗಳನ್ನು



'ಕದಡಿದ ನೀರು' ನಾಟಕದ ಒಂದು ದೃಶ್ಯ



'ಬೆಸಕ' ಅವರ 'ಸತ್ತವರ ನೆರಳು' ನಾಟಕದ ಒಂದು ದೃಶ್ಯ



'ಸತ್ತವರ ನೆರಳು' ನಾಟಕದ ಒಂದು ದೃಶ್ಯ

ಸೂಚಿಸುತ್ತಾ, ಪಾತ್ರಗಳ ಅಂತರಂಗದ ವ್ಯಾಪಾರಗಳನ್ನು ವಿಮರ್ಶಿಸುತ್ತಿದ್ದ ಹೆಚ್ಚಿನ ಪಾತ್ರವಂತೂ ತುಂಬ ಪರಿಣಾಮಕಾರಿಯಾಗಿತ್ತು.

ಒಟ್ಟಾರೆಯಾಗಿ, ಚಿಂತನ ಪ್ರಧಾನವಾದ ಈ ನಾಟಕವನ್ನು ಧಾರವಾಡದ ಕಲೋದ್ಧಾರಕ ಸಂಘದವರು ಎಲ್ಲಿಯೂ ಬಿಗಿ ಸಡಿಲಾಗದಂತೆ, ಪ್ರೇಕ್ಷಕರ ಆಸಕ್ತಿ ಕೆಡದಂತೆ ಪ್ರಸ್ತುತ ಪಡಿಸಿದ್ದಾರೆ. ಇದರ ನಿರ್ದೇಶನದ ಹೊಣೆಯನ್ನು ಹೊತ್ತ ಶ್ರೀ ಎಸ್. ಎನ್. ದೇಶಪಾಂಡೆಯವರ ಶ್ರಮವು ಪ್ರಶಂಸನೀಯವಾಗಿದೆ.

೧೯೬೮ರಲ್ಲಿ ಪ್ರಕಟವಾದ, ಜೋಶಿಯವರ 'ಸತ್ತವರ ನೆರಳು' ನಾಟಕವು ಅನೇಕ ಕಾರಣಗಳಿಗಾಗಿ ಉಲ್ಲೇಖಾರ್ಹವಾಗಿದೆ. ಒಂದೆಡೆಯಿಂದ, ಮಠ, ಆಶ್ರಮ ಮುಂತಾದ ಧಾರ್ಮಿಕ ಕೇಂದ್ರಗಳೊಳಗಿನ ರಾಜಕೀಯ ಪಟ್ಟಭದ್ರ ಹಿತಾಸಕ್ತಿ, ನಯವಂಚನೆಗಳನ್ನು ಇದು ಸೂಕ್ಷ್ಮವಾಗಿ ವಿಶ್ಲೇಷಿಸುತ್ತದೆ. ಇನ್ನೊಂದೆಡೆಯಿಂದ, ತನಗೆ ಒಗ್ಗದ ಜೀವನವನ್ನು ಒಗ್ಗಿಸಿಕೊಳ್ಳಬೇಕಾದ ಸಂಕಟಗಳಿಗೆ ಅಭಿವ್ಯಕ್ತಿಗಳನ್ನ ನೀಡುತ್ತದೆ. ಇಂಥ ಬದುಕುಗಳು ಅಲ್ಲೂ - ಇಲ್ಲೂ ಸಲ್ಲದೆ, ಉಭಯ ಭ್ರಷ್ಟವಾಗುವ ಕ್ರಮವೇ ಈ ನಾಟಕದ ಕೇಂದ್ರ ಬಿಂದುವಾಗಿದೆ. ಸ್ವಂತದ ವೈಫಲ್ಯವನ್ನು ಎದುರಿಸಲಾರದ ಪಲಾಯನವಾದ ಹಾಗೂ ಎಂದೂ ಸ್ವಾಭಿಮುಖವಾಗದ ವಿಕೃತಿಗಳ ಬಗೆಗಿನ ಗಾಢ ತೀಕ್ಷ್ಣ ವ್ಯಂಗ್ಯವು ಇದರ ಧನಾತ್ಮಕ ಅಂಶವಾಗಿದೆ.

ಸಂಸ್ಕೃತ ಸಂಭಾಷಣೆಗಳೂ ಸೇರಿದಂತೆ, ಸ್ಪಷ್ಟವಾದ ಉಚ್ಚಾರಣೆ, ಸಾಂದರ್ಭಿಕವಾದ ದಾಸರ ಪದಗಳ ಧಾರಾಳ ಬಳಕೆ, ಅಸಂಗತವಾದ ಪಾದಸರಣಿಯೇ ತಾರ್ಕಿಕವೂ, ಸುಸಂಬಂಧ್ಧವೂ ಆಗುವ ವೈರುಧ್ಯಗಳೆಲ್ಲ 'ಸತ್ತವರ ನೆರಳು' ರಂಗ ಪ್ರಸ್ತುತಿಯ ವೈಶಿಷ್ಟ್ಯಗಳಾಗಿವೆ. ಗ್ರೀಕ್ ನಾಟಕಗಳನ್ನು ನೆನಪಿಸುವ ಮೇಳದ ತಂತ್ರವೂ ಗಮನಾರ್ಹವಾಗಿದೆ. ಭೂತ ವರ್ತಮಾನ ಕಾಲ



'ಬೆನಕ' ಅವರ 'ಸತ್ತವರ ನೆರಳು' ನಾಟಕದ ಒಂದು ದೃಶ್ಯ

ನಿರ್ದೇಶನವನ್ನು ರಂಗಚಲನೆಗಳ ಮೂಲಕವೇ ಮಾಡಿಸಿದ ವಿಧಾನವೂ ಆಕರ್ಷಕವಾಗಿದೆ.

ಬಿ.ವಿ. ಕಾರಂತರ ನಿರ್ದೇಶನದಲ್ಲಿ, ಇನ್ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನ ನೀಡಿದ ಹೆಗ್ಗಳಿಕೆಯಿರುವ, ಬೆಂಗಳೂರಿನ 'ಬೆನಕ' ತಂಡದವರಿಂದ ಇದು ಪ್ರದರ್ಶಿತವಾಯಿತು. ಕಾರಂತರ ಸಂಪ್ರದಾಯವನ್ನು ಅಷ್ಟೇ ಚಾಕಚಕ್ಯತೆಯಿಂದ, ಈಗಿನ ನಿರ್ದೇಶಕರಾದ ಶ್ರೀ ಟಿ. ಎಸ್. ನಾಗಾಭರಣ ಅವರು ಮುಂದುವರೆಸುತ್ತಿದ್ದಾರೆ. ಸಹೃದಯರ ಅಭಿನಂದನೆಗಳಿಗೆ ತಪ್ಪದೆ ಬರುವ ಸದಭಿರುಚಿಯ ಸಾಕಷ್ಟು ಮಂದಿ ಮುಂಬಯಿಯಲ್ಲಿದ್ದಾರೆ. ಅಂಥವರ ಕಲಾಸಕ್ತಿಯನ್ನು ಒಂದಿಷ್ಟು ತಣಿಸಿದ ಪ್ರಾಯೋಜಕರು ಸ್ತುತ್ಯರ್ಹರಾಗಿದ್ದಾರೆ.

●

## ಮೈಸೂರು ಅಸೋಸಿಯೇಷನ್ನಿನಲ್ಲಿ ಜಿ.ಬಿ. ಜೋಶಿ ನಾಟಕೋತ್ಸವ

(ಪುಟ 7ರಿಂದ)

ಅಹಲ್ಯಾ ಬಲ್ಲಾಳ್ ಅವರು ಕಾರ್ಯಕ್ರಮ ನಿರೂಪಿಸಿ, ಅತಿಥಿಗಳನ್ನು ಪರಿಚಯಿಸಿ ದರು. ಜಿ.ಬಿ. ಜೋಶಿ ಅವರ ಪುತ್ರ ರಮಾಕಾಂತ ಜೋಶಿ ವಂದಿಸಿದರು.

ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಮೈಸೂರು ಸೇಲ್ಸ್ ಇಂಟರ್‌ನ್ಯಾಶನಲ್ ಲಿಮಿಟೆಡ್ ಜಂಟಿಯಾಗಿ ಪ್ರಾಯೋಜಿಸಿ ದ್ದವು. ಬಳಿಕ ಧಾರವಾಡದ ಕರ್ನಾಟಕ ಕಲೋದ್ಧಾರಕ ಸಂಘದ ಕಲಾವಿದರಿಂದ ಜಿ.ಬಿ. ಜೋಶಿ ಅವರ 'ಕದಡಿದ ನೀರು' ನಾಟಕ ಪ್ರಸ್ತುತಗೊಂಡಿತು.

ಎರಡನೇ ದಿನ ದಿನಾಂಕ ೨೭ರಂದು ಬೆನಕ ಬೆಂಗಳೂರು ಇವರಿಂದ ಸತ್ತವರ ನೆರಳು ನಾಟಕ ಪ್ರದರ್ಶಿಸಲಾಯಿತು. ನಾಟಕೋತ್ಸವ ಸಮಾರೋಪ ಸಮಾರಂಭದಲ್ಲಿ ''ಸಾರಸ್ವತ ಲೋಕಕ್ಕೆ ಜಿ.ಬಿ. ಜೋಶಿ ಅವರ ಕೊಡುಗೆ'' ವಿಚಾರ ಗೋಷ್ಠಿಯಲ್ಲಿ ಶ್ರೀ ಗಿರಡ್ಡಿ ಗೋವಿಂದರಾಜ್, ಶ್ರೀ ಟಿ.ಎಸ್. ನಾಗಾಭರಣ, ಶ್ರೀ ವ್ಯಾಸರಾವ್ ನಿಂಜೂರು, ಡಾ. ರಮಾಕಾಂತ ಜೋಶಿ ಹಾಗೂ ಶ್ರೀ ಆರ್ಯ ಮಾತನಾಡಿದರು. ದಿನಾಂಕ ೨೦ರಿಂದ ೨೭ರ ವರೆಗೆ ಮನೋಹರ ಗ್ರಂಥಮಾಲಾ ಧಾರವಾಡ ಇವರಿಂದ ಜಿ.ಬಿ. ಜೋಶಿಯವರ ಛಾಯಾ ಚಿತ್ರಗಳ ಮತ್ತು ಮನೋಹರ ಗ್ರಂಥಮಾಲಾ ಇವರಿಂದ ಪ್ರಕಾಶಿತವಾದ ಪುಸ್ತಕಗಳ ಪ್ರದರ್ಶನವು ನಡೆಯಿತು. ಮತ್ತು ದಿನಾಂಕ ೧೯ರಿಂದ ೨೭ರ ವರೆಗೆ ಕಾರ್ಯಕ್ರಮದ ಪ್ರಾಯೋಜಕರಾದ ಮೈಸೂರು ಸೇಲ್ಸ್ ಇಂಟರ್‌ನೇಶನಲ್‌ನವರು ಮೈಸೂರು ಸಿಲ್ಕ್ ಸೀರೆಗಳ ಪ್ರದರ್ಶನ ಹಾಗೂ ಮಾರಾಟವನ್ನು ಏರ್ಪಡಿಸಿದ್ದರು.

●

# ಜಿ. ಬಿ. ಜೋಶಿ ಶತಮಾನೋತ್ಸವ ಸಂಕಿರಣ

- ಓಂದಾಸ್ ಕಣ್ಣಂಗಾರ್

ಜಿ. ಬಿ. ಜೋಶಿ ಶತಮಾನೋತ್ಸವ ಸಮಿತಿ ಮತ್ತು ಮೈಸೂರು ಅಸೋಸಿಯೇಶನ್ ಸಹಯೋಗದಲ್ಲಿ ಮೈಸೂರು ಅಸೋಸಿಯೇಶನ್ ಸಭಾಗೃಹದಲ್ಲಿ ಜರಗಿದ ಜಿ.ಬಿ. ಜೋಶಿ ನಾಟಕೋತ್ಸವ ಸಮಾರೋಪ ಸಮಾರಂಭದಲ್ಲಿ ಸಾರಸ್ವತ ಲೋಕಕ್ಕೆ ಜಿ.ಬಿ. ಜೋಶಿಯವರ ಕೊಡುಗೆ ವಿಚಾರ ಗೋಷ್ಠಿಯಲ್ಲಿ ಅವರ ಸಾಹಿತ್ಯ ಕೃತಿಯ ಬಗ್ಗೆ ಖ್ಯಾತ ವಿಮರ್ಶಕ ಗಿರಡ್ಡಿ ಗೋವಿಂದರಾಜ್, ನಾಟಕ ಪ್ರಯೋಗದ ಬಗ್ಗೆ ಖ್ಯಾತ ರಂಗ ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಅವರ ವ್ಯಕ್ತಿತ್ವದ ಬಗ್ಗೆ ಕಥೆಗಾರ ವ್ಯಾಸರಾವ್ ನಿಂಜೂರು, ಮನೋಹರ ಗ್ರಂಥಮಾಲೆ ಬಗ್ಗೆ ಡಾ. ರಮಾಕಾಂತ ಜೋಶಿ ಹಾಗೂ ಜಿ.ಬಿ. ಜೋಶಿಯವರ ಎರಡು ನಾಟಕಗಳಾದ ಸತ್ತವರ ನೆರಳು ಮತ್ತು ಪರಿಮಳದವರು ನಾಟಕದ ಬಗ್ಗೆ ರಂಗಕರ್ಮಿ ಆರ್ಯರವರು ಮಾತನಾಡಿದರು.

ಆರ್ಯರವರು ಮಾತನಾಡುತ್ತಾ ಸತ್ತವರ ನೆರಳು ನಾಟಕ ಕನ್ನಡ ಹವ್ಯಾಸ ರಂಗಭೂಮಿಯಲ್ಲಿ ಪ್ರಥಮ ದಾಖಲೆ ಮಾಡಿದಂತಿದೆ. ಸತ್ತವರ ನೆರಳು ಹಾಗೂ ಪರಿಮಳದವರು ಈ ಎರಡು ನಾಟಕಗಳನ್ನು ಇಟ್ಟುಕೊಂಡು ಜಿ.ಬಿ. ಜೋಶಿಯವರು ಧರ್ಮದ ಬಗ್ಗೆ ಮಾತಾನಾಡಿದ್ದಾರೆ. ಧರ್ಮ ಇದರ ಕೇಂದ್ರ ವಸ್ತು. ಧನಾತ್ಮಕ ರೀತಿಯಾದ ಧರ್ಮದ ತಿರುಳು ಈ ನಾಟಕಗಳಲ್ಲಿ ಇದೆ. ವೈಚಾರಿಕ ದೃಷ್ಟಿಯಿಂದಲೂ ಇದು ಒಳ್ಳೆಯ ನಾಟಕ. ಅಲ್ಲದೆ ಸರ್ವಕಾಲಿಕ ಮೌಲ್ಯಗಳನ್ನು ಜೀವನದಲ್ಲಿ ಸಕ್ರಿಯ ಗೊಳಿಸುವಂತಹ ರೂಪ ನಾಟಕದಲ್ಲಿ ಇದೆ ಎಂದ ಆರ್ಯರವರು ಈ ಎರಡು ನಾಟಕಗಳು ಪರಸ್ಪರ ಪೂರಕವಾಗುತ್ತದೆ ಎಂದರು.

ಗಿರಡ್ಡಿ ಗೋವಿಂದರಾಜ್ ಮಾತನಾಡುತ್ತಾ ಜಿ.ಬಿ. ಜೋಶಿಯವರು ನಾಟಕಗಳ ಜತೆ ಬೇರೆ ರೀತಿಯ ಕೃತಿಗಳನ್ನು ರಚಿಸಿದ್ದಾರೆ. ನಾಟಕೇತರ ಸಾಹಿತ್ಯಗಳನ್ನು ನಾಟಕಗಳನ್ನು ಬರೆಯುವ ಮುಂಚೆ ಬರೆದಿದ್ದಾರೆ. ಇದನ್ನು ಜಡಭರತರ ಜೀವನದಲ್ಲಿ ಮಹತ್ವದ ಕೃತಿಯೆಂದು ಪರಿಗಣಿಸಲಾಗಲಿಲ್ಲ. ಜಡ ಭರತರ ಕನಸುಗಳು ವಿಶಿಷ್ಟವಾದ ಕೃತಿ. ಜಿ. ಬಿ. ಜೋಶಿಯವರು ಕನಸುಗಳನ್ನು ಮರೆಯುತ್ತಿರಲಿಲ್ಲ. ಅವರು ಅದನ್ನು ಬರೆದಿಟ್ಟುಕೊಂಡಿದ್ದರು. ಒಂದು ಕನಸಿಗೂ ಮತ್ತೊಂದು ಕನಸಿಗೂ ಏನೋ ಸಂಬಂಧ ಸೂತ್ರ ಇದೆ ಎಂದು ಅವರಿಗೆ ಅನಿಸಿತ್ತು. ಜಡ ಭರತರ ಕನಸುಗಳು ಪ್ರಕಟವಾದಾಗ ಇವನ್ನು ಹೇಗೆ ಅರ್ಥ ಮಾಡಿಕೊಳ್ಳುವುದೆಂದು ದಿಗಿಲೇ ಆಗಿತ್ತು. ಜೀವ ಅನೇಕ ಅನುಭವ ಮೂಲಕ ಹಾದು ಹೋಗುವಂತಹ ಇದಕ್ಕೆ ಯಾವುದೋ ಶಕ್ತಿ ಇದೆ ಎಂದು ಬೇಂದ್ರೆಯವರು ಹೇಳುತ್ತಾರೆ. ಬೇಂದ್ರೆಯವರ ಸ್ವಪ್ನವಿಜ್ಞಾನ ಲೇಖನದ ಮೂಲಕ ಇದನ್ನು ಅರ್ಥಮಾಡಿಕೊಳ್ಳಬಹುದೆಂದು ತಿಳಿಯಲಾಯಿತು. ಧರ್ಮ ಜಿಜ್ಞಾಸೆ ಕೂಡಾ ಜಡಭರತರ ಕನಸುಗಳಲ್ಲಿ ಕಾಣುತ್ತದೆ ಎಂದ ಗಿರಡ್ಡಿ ನಮ್ಮ ಭಾರತದ ಸ್ವಾತಂತ್ರ್ಯದ ಸಂಗ್ರಾಮದ ದಿನಗಳಲ್ಲಿ ನವೋದಯದ ಹಿನ್ನೆಲೆಯಲ್ಲಿ ಈ ಕನಸುಗಳಿಗೆ ಅರ್ಥವಿದೆ. ಜಡಭರತರ ಕನಸುಗಳು ಅವರ ಲೇಖನ ವ್ಯವಸಾಯದಿಂದ ಮಾಡಿದ ಅರ್ಧ ಕೃತಿಗಳು. ಅದರ ಜೀವಫಲ ಎಂಬ ಕವನ ಸಂಕಲನ ಕೂಡಾ ಇಂಗ್ಲಿಷಿನಲ್ಲಿ ಬಂದಿದ್ದು. ಈ ಕವಿತೆಗಳೂ ಕೂಡ ಕನಸಿನಲ್ಲಿಟ್ಟು ಬರೆದದ್ದು ಅವರ ಇಡೀ ಒಂದು ಸಾಹಿತ್ಯದ ಅರ್ಧ ಭಾಗ ಕನಸಿನ ಹಿಂದೆಯೇ ಬರೆದದ್ದು. ಇದರಿಂದ ಹೊರಗೆ ಬಂದವರು ಮೊದಲ ನಾಟಕ "ಮೂಕಬಲಿ" ಬರೆದದ್ದು ಇದನ್ನು ಕಾದಂಬರಿಯಾಗಿ ಬರೆಯಬೇಕೆಂದಿದ್ದರು. ಇಲ್ಲಿಗೆ ಜಡ ಭರತರಿಗೆ ಕನಸುಗಳು ಬೀಳುವುದು ನಿಂತು ಹೋಯಿತು. ಒಬ್ಬ ನಾಟಕಕಾರರಾಗಿ ಬೆಳಕಿಗೆ ಬಂದರು. ಎಂದು ಗಿರಡ್ಡಿಯವರು ವಿಶ್ಲೇಷಿಸಿದರು.



ವಿಚಾರ ಸಂಕಿರಣದಲ್ಲಿ ಗಿರಡ್ಡಿ ಗೋವಿಂದ ರಾಜು, ಟಿ.ಎಸ್. ನಾಗಾಭರಣ, ಡಾ. ವ್ಯಾಸರಾವ್‌ನಿಂಜೂರು,
ಡಾ. ಎಚ್.ಎಸ್. ಶ್ರೀನಿವಾಸ್, ಆರ್ಯ ರಮಾಕಾಂತ್ ಜೋಶಿ ಮತ್ತು ಡಾ. ತಾಳ್ತಜೆ ವಸಂತ್‌ಕುಮಾರ್

ಟಿ.ಎಸ್. ನಾಗಾಭರಣ : ಆರಂಭಿಕ ರಂಗಭೂಮಿಗೆ ಶ್ರೀರಂಗರ, ಕೈಲಾಸಂ ಇವರಿಗಿಂತ ಭಿನ್ನವಾದ ಶೈಲಿಯನ್ನು ಜಿ.ಬಿ.ಯವರು ತನ್ನದಾಗಿಸಿಕೊಂಡಿದ್ದಾರೆ. ಅವರ ಸತ್ತವರ ನೆರಳು ನಾಟಕ ಕನ್ನಡ ರಂಗಭೂಮಿಯ ಇತಿಹಾಸಕ್ಕೆ ಒಂದು ಕೊಡುಗೆ ಜಿ.ಬಿ. ಒಂದು ಅರ್ಥದಲ್ಲಿ ಕಂಪೆನಿ ನಾಟಕಗಳ ಸ್ಫೂರ್ತಿಯನ್ನು ತನ್ನದಾಗಿಸಿಕೊಂಡಿದ್ದರು. ಕಂಪೆನಿ - ಹವ್ಯಾಸ ನಾಟಕಗಳನ್ನು ಬೆಸೆಯುವ ಕಾರ್ಯವನ್ನು ಅವರು ಮಾಡಿದ್ದಾರೆ. ಇವರೆನ್ನೆಲ್ಲ ಒಟ್ಟುಗೂಡಿಸುವ ಪ್ರಯೋಗ ಇವರಲ್ಲಿ ಆಗಿದೆ. ಅದಕ್ಕಾಗಿ ಶ್ರೀರಂಗ, ಕೈಲಾಸಂ ಗಿಂತ ಭಿನ್ನವಾಗಿ ಎಲ್ಲಾ ಕಾಲಕ್ಕೂ ಸಂದುವ ನಾಟಕಕಾರರಾಗಿದ್ದಾರೆ. ಅದಕ್ಕೆ ಉದಾಹರಣೆ 1975ರಲ್ಲಿ ಮಾಡಿದ -'ಸತ್ತವರ ನೆರಳು' ನಾಟಕ ಇಂದು ನಮ್ಮೆಲ್ಲರನ್ನು ರಂಜಿಸಿದ್ದೇ ಸಾಕ್ಷಿ. 'ಮೂಕ ಬಲಿ' ನಾಟಕ ಪ್ರಯೋಗದಲ್ಲಿ ಗ್ರಾಮೀಣ ಸೊಗಡನ್ನು ಪ್ರತಿಬಿಂಬಿಸುತ್ತದೆ. ಆದರೆ ಆ ನಾಟಕ ಅಷ್ಟೊಂದು ಪರಿಣಾಮ ಬೀರಲಿಲ್ಲ ಎಂಬ ನನ್ನ ಅನಿಸಿಕೆ.

'ಕದಡಿದ ನೀರು' ಉತ್ತರ ಕನ್ನಡ ಬದುಕನ್ನು ಬಿಂಬಿಸುವ ಕೃತಿ. ಇದು ಉತ್ತಮ ಪ್ರಯೋಗವಾಗಿ ರಂಗ ಕಂಡಿದೆ. ಅದನ್ನು ಯಾವುದೇ ನಿರ್ದೇಶಕ ರಂಗಕ್ಕೆ ತಂದಾಗ ಅದರ ಕೃತಿಯಿಂದಾಗಿ ಯಶಸ್ಸನ್ನು ಕಂಡಿದೆ. ರಂಗಭೂಮಿಯು ಬೇರೆ ಬೇರೆ ಸಾಧ್ಯತೆಗಳನ್ನು ತನ್ನದಾಗಿಸಿಕೊಳ್ಳುವಲ್ಲಿ ಕದಡಿದ ನೀರು ಸಾರ್ಥಕವಾಗಿದೆ.

ಆಊರು ಈಊರು ಎಲ್ಲಾ ರೀತಿಯಲ್ಲಿ ಎಲ್ಲಾ ವರ್ಗದ ಪ್ರೇಕ್ಷಕರನ್ನು ತಡೆಹಿಡಿಯುವಂತಹ ನಾಟಕ. ಈ ನಾಟಕ ನಿರ್ದೇಶಕನಿಗೆ ಸವಾಲಾಗುವಂತಹ ನಾಟಕ.

ಜರ್ಮನ್ ಬಂಗಲೆ ಒಂದು ಶಬ್ದ ಚಿತ್ರವನ್ನು ಧ್ವನಿಗಳ ಮೂಲಕ ಕಟ್ಟಿಕೊಳ್ಳುತ್ತಾ ಸಾಗುವ ಈ ನಾಟಕವನ್ನು ಯಾರು ರಂಗ ಪ್ರಯೋಗ ಮಾಡಲು ಧೈರ್ಯಮಾಡಲಿಲ್ಲ. ನಮ್ಮಲ್ಲಿ ನಿರ್ದೇಶಕರಿಗೆ ಜಿ.ಬಿ. ಬಿಟ್ಟು ಹೋದಂತಹ ಸವಾಲ್ ಈ ನಾಟಕ ಆಗಿದೆ.

ಒಟ್ಟಾರೆ ನಾಟಕೀಯತೆ ಹಾಗೂ ನಾಟಕೀಯ ಕ್ರಿಯೆಯನ್ನು ತಮ್ಮ ನಾಟಕಗಳಲ್ಲಿ ಬಳಸಿಕೊಂಡವರು ಜಿ.ಬಿ. ಅವರ ಸತ್ತವರ ನೆರಳು ತಾಂತ್ರಿಕವಾಗಿ ಹೆಚ್ಚು ಸಾತ್ವಿಕವಾದ ಕೃತಿ.

ವ್ಯಾಸರಾವ್ ನಿಂಜೂರು: ಜಿ.ಬಿ. ಜೋಶಿಯವರ ನಿಕಟ ಸ್ನೇಹವನ್ನು ಪಡೆದವರಲ್ಲಿ ನಾನು ಒಬ್ಬ. 40



ಮೈಸೂರು ಸೇಲ್ಸ್ ಇಂಟರ್‌ನ್ಯಾಶನಲ್‌ರವರು ಮೈಸೂರು ರೇಷ್ಮೆ ಸೀರೆ ಮತ್ತು ಇತರ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಏರ್ಪಡಿಸಿದ್ದರು.

ವರ್ಷಗಳ ಹಿಂದೆ ಮಣಿಪಾಲದಲ್ಲಿದ್ದಾಗ ಬೆಳೆದ ಬಾಂಧವ್ಯ ಮತ್ತೆ ಗಾಢವಾಗಿ ಬೆಳೆಯಿತು. ಆ ಕಾಲದಲ್ಲಿ ಆ ದಿನಗಳಲ್ಲಿ ಅವರೊಂದಿಗೆ ನಡೆಸುತ್ತಿದ್ದ ಚರ್ಚೆ ಅಪ್ಯಾಯಮಾನವಾಗುತಿತ್ತು. ನನಗೆ ಅಂದು ನಮ್ಮ ಸಾಹಿತ್ಯದ ಬಗ್ಗೆ ತಿಳಿಸಿದವರು ಜೋಶಿ. ನನ್ನನ್ನು ಕಾದಂಬರಿಕಾರನ್ನಾಗಿ ಮಾಡಲು ಜಿ.ಬಿ. ಛಲ ತೊಟ್ಟಿದ್ದರು. ಆ ಪ್ರೇರಣೆಯಿಂದಲೇ ನನ್ನ ಮೊದಲ ಕಾದಂಬರಿ 'ಉಸಿರು' ಜನ್ಮ ಪಡೆದಿತ್ತು. ಅನಂತರ ನಾಟಕ ಬರೆಯಲು ಪ್ರೇರೇಪಿಸಿದರು. ಒಟ್ಟಾರೆ ನನ್ನನ್ನು ಒಬ್ಬ ಲೇಖಕನನ್ನಾಗಿ ಮಾಡಿದ ಶ್ರೇಯಸ್ಸು ಜಿ.ಬಿ. ಜೋಶಿಯವರಿಗೆ ಸಲ್ಲುತ್ತದೆ ಎಂದು ಡಾ. ನಿಂಬೂರು ಜಿ.ಬಿ. ಜೋಶಿಯವರ ಬಗೆಗಿನ ನೆನಪುಗಳನ್ನು ತೆರೆದಿಟ್ಟರು.

**ರಮಾಕಾಂತ ಜೋಶಿ :** ಮನೋಹರ ಗ್ರಂಥ ಮಾಲೆ ಹುಟ್ಟಲಿಕ್ಕೆ ಕಾರಣವಾದದ್ದು ಗೆಳೆಯರ ಗುಂಪು ಜೈ ಕರ್ನಾಟಕ ಗ್ರಂಥ ಮಾಲೆಯ ಮುಚ್ಚುವಿಕೆಯಿಂದಲೂ ಇದು ಹುಟ್ಟಿ ಸುದರ್ಶನ ಕಾದಂಬರಿ ಮೊದಲ ಪ್ರಕಟಣೆಯಾಗಿತ್ತು, ಅದು ಈ ಗ್ರಂಥ ಮಾಲೆ ಮುಚ್ಚುವ ಸ್ಥಿತಿಗೆ ಬಂದಾಗ ಇಬ್ಬರು ಗೆಳೆಯರು ಹೊರನಡೆದು ಹೋದಾಗ ಜಿ.ಬಿ. ಜೋಶಿಯವರು 1934ರಿಂದ ಏಕೈಕವಾಗಿ ಮುನ್ನಡೆಸಿಕೊಂಡು ಹೋದರು. ಆವಾಗ ಸಾಹಿತ್ಯಿಕವಾಗಿ ಬೇಂದ್ರೆ, ಗೋಕಾಕ, ಮುಗಳಿಯವರು ಬೆನ್ನು ತಟ್ಟಿದ್ದರು. ಜಿ.ಬಿ. ಎಲ್ಲಾ ಭಾಗದ ಲೇಖಕರ ಬೆನ್ನು ಹತ್ತಿ ಅವರ ಪುಸ್ತಕಗಳನ್ನು ಪ್ರಕಟಿಸಿದ್ದರು. ಅವ್ಯವಹಾರವನ್ನು ಅವರು ಎಂದೂ ಲಕ್ಷ್ಯಕ್ಕೆ ತೆಗೆದು ಕೊಳ್ಳುತ್ತಿರಲಿಲ್ಲ. ಸದಾ ವ್ಯವಹಾರ ಆಗಬೇಕೆಂದು ತಿಳಿದವರು. ಅದ್ದರಿಂದಲೇ ಕೈ ಸುಟ್ಟುಕೊಂಡಿದ್ದರು. ಅವರಿಗಿರುವ ಹುಚ್ಚು ಪುಸ್ತಕ ಪ್ರಕಟಿಸುವುದು ಮತ್ತು ನಾಟಕ ಆಡಿಸುವುದು ರಮಾಕಾಂತ ಜೋಶಿಯವರು ಗ್ರಂಥಮಾಲೆಯ ಬಗೆಗಿನ ಅನುಭವಗಳನ್ನು ಹಂಚಿಕೊಂಡರು.

ಮೈಸೂರು ಅಸೋಸಿಯೇಶನ್‌ನ ಉಪಾಧ್ಯಕ್ಷರಾದ ಡಾ. ಎಚ್.ಎಸ್. ಶ್ರೀನಿವಾಸ ಪ್ರಸ್ತಾವನೆ ಸ್ವಾಗತ ಮಾಡಿ ಎಲ್ಲಾ ಉಪನ್ಯಾಸಕರಿಗೆ ಹೂಗುಚ್ಛ ನೆನಪಿನ ಕಾಣಿಕೆ ನೀಡಿ ಸತ್ಕರಿಸಿದರು.

ನಿರೂಪಣೆ ಪರಿಚಯವನ್ನು ಸುಮಾದ್ವಾರಕಾನಾಥ್ ಮಾಡಿದರೆ ಡಾ. ತಾಳ್ತಜೆ ವಸಂತ ಕುಮಾರ್ ವಂದಿಸಿದರು.

## ಸಿ.ಡಿ.ಯಲ್ಲಿ ಸಮಗ್ರ ದಾಸ ಸಾಹಿತ್ಯ

(ಪುಟ 6ರಿಂದ)

ಸಿಗುತ್ತದೆ. ಅದರಲ್ಲಿ ಕೇಳಬಹುದಾದ 'ಹಾಡುಗಳ' ಬಗ್ಗೆಯೂ ಮಾಹಿತಿ ಇದೆ. ಕಠಿಣ ಶಬ್ದಗಳ ಅರ್ಥವನ್ನು 'ಶಬ್ದಾರ್ಥ' ವಿಭಾಗದಲ್ಲಿ ಪಡೆಯಬಹುದು. 'ಹುಡುಕುವಿಕೆ' ಈ ಸಿ.ಡಿ. ಅತ್ಯಂತ ವೈಶಿಷ್ಟ್ಯಪೂರ್ಣ ಅಂಶ. 'ಹುಡುಕುವಿಕೆ' ವಿಭಾಗದಲ್ಲಿ 'ದಾಸರ ಹೆಸರು' ಅಥವಾ 'ದಾಸರ ಕಾಲ' ಅಥವಾ 'ಜನ್ಮಸ್ಥಳ' ಗಳ ಬಗ್ಗೆ ವಿವರ ನೀಡಿದರೆ ಸಂಬಂಧಿಸಿದ ಮಾಹಿತಿ ಪರದೆಯ ಮೇಲೆ ಮೂಡುತ್ತದೆ. ಅಷ್ಟೇ ಅಲ್ಲ, 'ಕೃತಿಯ ಮೊದಲ ಸಾಲು' ನೀಡಿಯೂ ವಿವರವಾದ ಮಾಹಿತಿ ಪಡೆಬಹುದು. ಯಾವುದೋ ಒಂದು ಪದ ನೀಡಿ ಆ ಬಗ್ಗೆ ಯಾವ್ಯಾವ ಕೀರ್ತನೆಗಳಲ್ಲಿ ಉಲ್ಲೇಖವಿದೆ ಎಂಬ ಬಗ್ಗೆಯೂ ವಿವರ ಪಡೆಯಬಹುದು. ದಾಸರ ಮಾಹಿತಿಯಲ್ಲಿ ಅವರ ತಂದೆ ತಾಯಿ. ಹುಟ್ಟೂರು, ಕಾಲ ಸೇರಿದಂತೆ ವಿವರವಾದ ಮಾಹಿತಿ ಸಿ.ಡಿ.ಯಲ್ಲಿ ದೊರೆಯುತ್ತದೆ. ಹರಿದಾಸರು ಮಾತ್ರವಲ್ಲದೆ ಹರದಾಸರ ಬಗ್ಗೆಯೂ ಈ ಸಿ.ಡಿ.ಯಲ್ಲಿ ವಿವರಗಳಿವೆ.

'ಹಾಡುಗಳು' ವಿಭಾಗದಲ್ಲಿ ಎಲ್ಲ ಆಲಿಸಬಹುದಾದ ಹಾಡುಗಳ ಪಟ್ಟಿ ಅಕಾರಾದಿಯಲ್ಲಿ ದೊರೆಯುತ್ತದೆ. ನಿಮಗೆ ಬೇಕಾದ ಹಾಡಿನ ಮೇಲೆ ಕ್ಲಿಕ್ ಮಾಡುವ ಮೂಲಕ ಹಾಡುಗಳನ್ನು ಕೇಳಬಹುದು. ಈ ಸಿ.ಡಿ.ಯಲ್ಲಿರುವ ಮಾಹಿತಿ ಮತ್ತು ವಿವರಗಳು www.dasasahitya.org ವೆಬ್ ಸೈಟ್‌ನಲ್ಲಿಯೂ ದೊರೆಯುತ್ತವೆ.

ಈ ಸಿ.ಡಿ.ಯಲ್ಲಿರುವ ಮಾಹಿತಿಗಳನ್ನು ಉಪಯೋಗಿಸುವುದಕ್ಕಾಗಿ ಕನಿಷ್ಠ ಪೆಂಟಿಯಮ್ III 500 MHz ಅಥವಾ ಅದಕ್ಕಿಂತ ವೇಗ ಕನಿಷ್ಠ 64 ಎಂ.ಬಿ. ರ್ಯಾಮ್, 128 ಎಂಬಿ ರ್ಯಾಮ್ ಇದ್ದರೆ ಒಳಿತು. 32 ಬಿಟ್ ಕಲರ್ ಡೆಪ್ತ್ ಇರುವ 1024 x 768 ಪಿಕ್ಸಲ್ ಕಾಡ್ ಸಾಮರ್ಥ್ಯದ ಪರದೆ ಮತ್ತು 16 ಬಿಟ್ ಪಿಸಿಎಮ್ ಸೌಂಡ್ ಕಾರ್ಡ್, 8 x CD-RAM ಅಥವಾ ಅದಕ್ಕಿಂತ ವೇಗವಾಗಿರುವ ಕಂಪ್ಯೂಟರ್ ಅಗತ್ಯವಿದೆ.

ಸಮಗ್ರ ದಾಸ ಸಾಹಿತ್ಯ ವಿಪುಲವಾದ ಮಾಹಿತಿ ಒದಗಿಸುವ ಈ ಸಿ.ಡಿ. ಬೆಲೆ ಮಾತ್ರ ತುಂಬಾರಿಯೇ ಸರಿ.

ಸರ್ಕಾರ ಈ ಸಿ.ಡಿಯ ಬೆಲೆಯನ್ನು 1800 ರೂಪಾಯಿಗಳಿಗೆ ನಿಗದಿ ಮಾಡಿದೆ. ಅತ್ಯುಪಯುಕ್ತವಾದ ಇಂತಹ ಸಿ.ಡಿಯ ಹಣದ ವಿಷಯಕ್ಕಾಗಿಯೇ ಸಾಮಾನ್ಯರಿಂದ ಉಳಿಯುವ ಅಪಾಯವೂ ಇದೆ.

ಕೃಪೆ : ಪ್ರಜಾವಾಣಿ.

## OLD GANDHIAN HN PASSES AWAY



Dr. H. Narasimhaiah, popularly known as HN passed away recently at Bangalore. He was ailing for some time. HN, a doctorate in Physics, was inspired by Mahatma Gandhi during the freedom struggle and actively participated in the movement. In the post independent era, shunning political arena he chose to stay with the field of education and social service. He led a simple Spartan life. He encouraged and promoted scientific and rational thinking by creating a science forum in his institution. He held many important positions such as the Vice Chancellor, Member of Legislative Council etc. but never compromised with his ideals. Dr. H.N. was synonymous with National College. With his passing away, our society has lost a great personage.



# ಶ್ರೀ ತ್ಯಾಗರಾಜರ ಮೇಲೆ ಶ್ರೀ ಪುರಂದರದಾಸರ ಪ್ರಭಾವ

- ನಾಗಭೂಷಣ



**ಪುಷ್ಯ ಬಹುಳ ಪಂಚಮಿಯಿಂದ ಮೊದಲುಗೊಂಡು ದಕ್ಷಿಣ ಭಾರತದಲ್ಲಿ ಎಲ್ಲೆಡೆ ಶ್ರೀ ತ್ಯಾಗರಾಜರ ಶ್ರೀ ಪುರಂದರದಾಸರ ಆರಾಧನೆ ತಿಂಗಳುಗಳ ಕಾಲ ಪ್ರತಿ ವರ್ಷ ಆಚರಿಸಲ್ಪಡುತ್ತದೆ. ಸಂಗೀತಗಾರರಿಗೆ ತಮ್ಮ ಸಂಗೀತ ಗುರುಗಳಿಗೆ ಭಕ್ತಿಯನ್ನರ್ಪಿಸುವ ಸಂಭ್ರಮವಾದರೆ ಸಂಗೀತ ಪ್ರೇಮಿಗಳಿಗೆ ರಸದೌತಣದ ಕಾಲ. ಈ ಸಂದರ್ಭದಲ್ಲಿ ತಯಾರಿಸಿದ ಭಕ್ತಿಪೂರ್ವಕ ಲೇಖನ.**

ವೇದಗಳ ಕಾಲದಿಂದಲೂ, ನಮ್ಮ ಸಂಗೀತವು ಭಾರತೀಯ ಸಂಗೀತವೆಂದೇ ಪರಿಗಣಿಸಲ್ಪಡುತ್ತಿತ್ತು. ಹನ್ನೆರಡನೇ ಶತಮಾನದಲ್ಲಿ ಮೊಗಲರ ಆಕ್ರಮಣದಿಂದಾಗಿ ಭಾರತವು ಉತ್ತರ ಮತ್ತು ದಕ್ಷಿಣವೆಂದು ಇಬ್ಭಾಗವಾಯಿತು. ಉತ್ತರ ಭಾರತವನ್ನು ಆಳುತ್ತಿದ್ದ ಮೊಗಲ ದೊರೆಗಳು ಪರ್ಷಿಯಾದಿಂದ ಸಂಗೀತಗಾರರನ್ನು ಕರೆಸಿಕೊಂಡು ತಮ್ಮ ಆಸ್ಥಾನದಲ್ಲಿರಿಸಿಕೊಂಡು ಸಂಗೀತವನ್ನು ಸವಿಯುತ್ತಿದ್ದರು. ಕ್ರಮೇಣ ಆ ಸಂಗೀತ ಜನಪ್ರಿಯವಾಗಿ ಉತ್ತರಾದಿ ಸಂಗೀತವೆಂದು ಕರೆಯಲ್ಪಡುತ್ತಿತ್ತು. ದಕ್ಷಿಣಭಾರತದಲ್ಲಿ ಆಯಾ ಪ್ರಾಂತ್ಯಗಳ, ಭಾಷೆಗಳ ಪ್ರಭಾವಕ್ಕೊಳಗಾಗಿ ದಕ್ಷಿಣಾದಿಯೆಂದು ಕರೆಯಲ್ಪಡುತ್ತಿತ್ತು. ದಕ್ಷಿಣ ಭಾರತದಲ್ಲಿ ಶಿವಶರಣರ ವಚನಗಳು, ಆಳ್ವಾರರ ತಿರುಕ್ಕೊರಳ್, ಯೋಗಿವೇಮನನ ವಚನಗಳು, ಕೇರಳದ ಜಾನಪದ ಪದಗಳು ಪ್ರಚಲಿತದಲ್ಲಿದ್ದು, ಸಂಗೀತಕ್ಕೆ ಯಾವುದೇ ಒಂದು ನಿರ್ದಿಷ್ಟವಾದ ಪದ್ಧತಿ ಇರಲಿಲ್ಲ. 16ನೇ ಶತಮಾನದಲ್ಲಿ ಶ್ರೀ ಪುರಂದರದಾಸರು ತಮ್ಮ ಗುರುಗಳ ಆದೇಶದಂತೆ ಭಗವನ್ನಾಮ ಸಂಕೀರ್ತನೆ ಮೂಲಕ ಭಕ್ತಿ ಪ್ರಚಾರ ಮಾಡಲು ಪ್ರಾರಂಭಿಸಿದರು. ಎಲ್ಲರೂ ಭಗವನ್ನಾಮ ಸಂಕೀರ್ತನೆ ಹಾಡಲು ಅನುಕೂಲವಾಗುವಂತೆ ಸಂಗೀತ ಪಠ್ಯಕ್ರಮವೊಂದನ್ನು ಸಿದ್ಧ ಪಡಿಸಿದರು. ಸರಳ, ಜಂಟಿವರಸೆಗಳು, ಅಲಂಕಾರ, ಪಿಳ್ಳಾರಿ ಗೀತೆಗಳು, ಪಲ್ಲವಿ, ಅನುಪಲ್ಲವಿ, ಚರಣ, ಅಂಕಿತಗಳನ್ನೊಳ ಗೊಂಡ ಕೀರ್ತನೆಗಳನ್ನು ರಚಿಸಿ ಪ್ರಚಾರ ಮಾಡಿದರು. ಈ ಪದ್ಧತಿಯು ದಕ್ಷಿಣ ಭಾರತದಲ್ಲೆಲ್ಲಾ ಪ್ರಸರಿಸಿ ಜನಪ್ರಿಯವಾಗಿ ತಮ್ಮ ಸಂಗೀತ ಅಭ್ಯಾಸಕ್ರಮದಲ್ಲಿ ಅಳವಡಿಸಿಕೊಂಡರು. ಮುಂದೆ ಇದೇ ಕರ್ನಾಟಕ ಸಂಗೀತವೆಂದು ಪ್ರಸಿದ್ಧಿ ಪಡೆಯಿತು. ಸಂಗೀತ ಶಾಸ್ತ್ರಜ್ಞರು ಶ್ರೀ ಪುರಂದರದಾಸರನ್ನು ''ಕರ್ನಾಟಕ ಸಂಗೀತ ಪಿತಾಮಹ''ನೆಂದು ಗೌರವಿಸಿರುವುದು ಸಮಂಜಸವಾಗಿದೆ.

ಶ್ರೀ ಪುರಂದರದಾಸರ ನಂತರ 300 ವರ್ಷಗಳ ನಂತರ ಜನಿಸಿದ ಶ್ರೀ ತ್ಯಾಗರಾಜರು ಕರ್ನಾಟಕ ಸಂಗೀತಕ್ಕೆ ಅಪಾರವಾದ ಕೊಡುಗೆಯನ್ನಿತ್ತು ಜಗತ್ಪ್ರಸಿದ್ಧಿಯಾಗುವಂತೆ ಮಾಡಿದ್ದಾರೆ. ಕರ್ನಾಟಕ ಸಂಗೀತ ಪಿತಾಮಹರಾದ ಶ್ರೀ ಪುರಂದರದಾಸರ ಪ್ರಭಾವ ಶ್ರೀ ತ್ಯಾಗರಾಜರ ಮೇಲೆ ಇತ್ತೆ? ಎಂಬುದರ ಬಗ್ಗೆ ವಾದ ವಿವಾದಗಳಿವೆ. ಈ ಬಗ್ಗೆ ಖ್ಯಾತ ಸಂಗೀತ ಶಾಸ್ತ್ರಜ್ಞರಾದ ಮೈಸೂರಿನ ಡಾ. ರಾ. ಸತ್ಯನಾರಾಯಣ ಮತ್ತು ಮದ್ರಾಸ್ ಮ್ಯೂಸಿಕ್ ಅಕಾಡೆಮಿಯ ಹಿರಿಯ ಸದಸ್ಯ ಡಾ. ವಿ.ವಿ. ಶ್ರೀವತ್ಸ ಅವರುಗಳು ಅನೇಕ ಆಧಾರಗಳನ್ನು ಕೊಟ್ಟು ಶ್ರೀ ಪುರಂದರದಾಸರ ಪ್ರಭಾವ ಶ್ರೀ ತ್ಯಾಗರಾಜರ ಮೇಲಿದೆ ಎಂಬುದನ್ನು ಸ್ಪಷ್ಟೀಕರಿಸಿದ್ದಾರೆ.

ಶ್ರೀ ತ್ಯಾಗರಾಜರ ಮಾತೋಶ್ರೀ ಸೀತಮ್ಮನವರು ಶ್ರೀ ಪುರಂದರದಾಸರ ದೇವರ ನಾಮಗಳನ್ನು ತಮ್ಮ ಪೂಜಾ ಸಮಯದಲ್ಲಿ ಹಾಡಿಕೊಳ್ಳುತ್ತಿದ್ದರು. ಬಾಲಕನಾಗಿದ್ದ ತ್ಯಾಗರಾಜನಿಗೆ ಅದನ್ನು ಕೇಳಿ ಪ್ರಭಾವಿತನಾಗಿ, ಮುಂದೆ ಪದ್ಧತಿಯನ್ನು ಅನುಸರಿಸಿ ಕೀರ್ತನೆಗಳನ್ನು ರಚಿಸಲು ಸಹಕಾರಿಯಾಯಿತು. ಶ್ರೀ ಪುರಂದರದಾಸ ಕೃತಿ ರಚನೆ ಪದ್ಧತಿಯಂತೆ ಪಲ್ಲವಿ, ಅನುಪಲ್ಲವಿ ಚರಣಗಳು ಮತ್ತು ಅಂಕಿತಗಳನ್ನೊಳಗೊಂಡ ಕೃತಿಗಳನ್ನು ಶ್ರೀ ತ್ಯಾಗರಾಜರು ರಚಿಸಿದ್ದಾರೆ.

ಶ್ರೀ ಪುರಂದರರು ಪಲ್ಲವಿಯಲ್ಲಿ ಮುಖ್ಯ ವಿಷಯವನ್ನು ಪ್ರಸ್ತಾವಿಸಿ, ಚರಣಗಳಲ್ಲಿ ಅದರ ವಿಸ್ತಾರವನ್ನು ಮಾಡಿದ್ದಾರೆ. ಶ್ರೀ ತ್ಯಾಗರಾಜರ ಕೃತಿಗಳಲ್ಲೂ ಇದನ್ನು ನಾವು ಕಾಣಬಹುದು. ಶ್ರೀ ತ್ಯಾಗರಾಜರ ದಿವ್ಯನಾಮ ಸಂಕೀರ್ತನೆಗಳು ಶ್ರೀ ಪುರಂದರದಾಸರ ದೇವರ ನಾಮಗಳನ್ನು ಹೋಲುತ್ತದೆ. ಪ್ರಾಚೀನ ರಾಗಗಳಾದ ಸೌರಾಷ್ಟ್ರ, ಪುನ್ನಾಗವರಾಳಿ, ಕೇದಾರ, ಶಂಕರಾಭರಣ, ನಾದನಾಮಕ್ರಿಯೆ, ಕಲ್ಯಾಣಿ, ಭೈರವಿ ರಾಗಗಳನ್ನು ಇಬ್ಬರೂ ಉಪಯೋಗಿಸಿ ಕೃತಿಗಳನ್ನು ರಚಿಸಿದ್ದಾರೆ. ಶ್ರೀ ತ್ಯಾಗರಾಜರು ಸಪ್ತ ತಾಳಗಳನ್ನು ಉಪಯೋಗಿಸದಿದ್ದರೂ, ತ್ರಿಪುಟ, ಝಂಪೆ, ರೂಪಕ, ಆದಿ ಮತ್ತು ಛಾಪು ತಾಳಗನ್ನು ಉಪಯೋಗಿಸಿಕೊಂಡಿದ್ದಾರೆ. ಶ್ರೀ ತ್ಯಾಗರಾಜರ ಹೆಚ್ಚು ಕೃತಿಗಳು ಶ್ರೀ ಪುರಂದರದಾಸರ ಕೃತಿಗಳಂತೆ ಮಧ್ಯಮ ಕಾಲದ ಕೃತಿಗಳು. ವಸ್ತು ವಿಷಯಗಳಲ್ಲೂ ಸಹ ಇಬ್ಬರಲ್ಲೂ ಸಾಮ್ಯತೆ ಇದೆ. ಉದಾಹರಣೆಗೆ ಶ್ರೀ ಪುರಂದರದಾಸರ ಕೃತಿ ''ಗುರುವಿನ ಗುಲಾಮನಾಗುವ ತನಕ'' ಶ್ರೀ ತ್ಯಾಗರಾಜರ ''ಶ್ರೀ ಗುರುಲೋಕ ಯಟ ವಂಟಿ'', ''ತಾಳಬೇಕು ತಕ್ಕ ಮೇಳಬೇಕು''- ''ಸೊಗಸುಗಾ ಮೃದಂಗ ತಾಳಮು'', ''ಕೇಳನೋಹರಿ ತಾಳನೋ ತಾಳ ಮೇಳಗಳಿದ್ದು ಪ್ರೇಮವಿಲ್ಲದಗಾನ''- ''ಸಂಗೀತ ಜ್ಞಾನಮು ಭಕ್ತಿ ವಿನಾ'', ''ಎಲ್ಲಾ ಸಾಧನವಿದ್ದು ತುಳಸಿ ಇಲ್ಲದ ಪೂಜೆ''- ''ತುಳಸಿ ದಳ ಮುಲಚೆ ಸಂತೋಷ ಮುಗಾ'', ''ನಿನ್ನ ನೋಡಿ ಧನ್ಯನಾದೆನೋ''- ''ನಿನ್ನನೇರಿ ನಮ್ಮಿ ನಾನು'', ''ಏನು ಬರೆದೆಯೋ ಬ್ರಹ್ಮ''- ''ದುರ್ಮಾಗಚರಾ'' ಇತ್ಯಾದಿ. ಶ್ರೀ ತ್ಯಾಗರಾಜರು ತಮ್ಮ ''ಹರಿದಾಸ ವೆಡಲು'' ಕೃತಿಯಲ್ಲಿ ತಾವು ಎಲ್ಲವನ್ನು ತ್ಯಜಿಸಿ ಹರಿಸರಾಗಲು ಇಚ್ಛಿಸುವುದಾಗಿ ತಮ್ಮ ಮನೋಗತವನ್ನು ವ್ಯಕ್ತಪಡಿಸಿದ್ದಾರೆ. ಹರಿದಾಸ ಪರಂಪರೆ ಶ್ರೀ ಪುರಂದರದಾಸರಿಂದ ಪ್ರಾರಂಭವಾಯಿತೆಂದು ಅವರಿಗೆ ತಿಳಿದಿತ್ತು (?)

ಶ್ರೀ ತ್ಯಾಗರಾಜರು ತಾವು ರಚಿಸಿದ ತೆಲುಗು ಪ್ರಬಂಧಗಳಲ್ಲೊಂದಾದ ''ಶ್ರೀ ಪ್ರಹ್ಲಾದ ಭಕ್ತವಿಜಯ''ದ ಮೊದಲ ಅಂಕದಲ್ಲಿ ದೇವತಾಸ್ತುತಿಯಾದ ನಂತರ

ದುರಿತ ವ್ರಾತ ಮುಲೆಲ್ಲನು
ಬರಿಯಾರ್ಚೆಡಿ
ಹರಿಗುಣ ಮುಲುಪಾಡು ಚುನೆಪುಡುನ್
ಪರವಶುಡೈ ವೆಲಯು ಪುರಂದರದಾಸುನಿ
ಮಹಿಮ ಮುಲನು
ದಲು ಚೆದನು ಮದಿಲೋನ್

(ಪಾಪರಾಶಿಯನ್ನೆಲ್ಲಾ ಹೋಗಲಾಡಿಸುವ ಹರಿಯ ಮಹಿಮೆಯನ್ನು ಎಂದೂ ಹಾಡುತ್ತಾ ಮೈಮರೆಯುವ ಶ್ರೀ ಪುರಂದರದಾಸರ ಹಿರಿಮೆಯನ್ನು ನನ್ನ *(ಪುಟ 15ಕ್ಕೆ)*

### ಬದುಕಿನ ವಿಕಾಸದ ಚಿಂತನೆಗಳು

# ಅರೆ ಶತಮಾನದ ಅಲೆ ಬರಹಗಳು

ಲೇಖಕ : ಕೆ.ವಿ. ಸುಬ್ಬಣ್ಣ (ಲೇಖನ ಸಂಕಲನ 1954 - 2004)
ಸಂಪಾದನೆ : ಟಿ.ಪಿ. ಅಶೋಕ ಅಕ್ಷರ ಪ್ರಕಾಶನ ಹೆಗ್ಗೋಡು (ಸಾಗರ) ಪುಟಗಳು 848 ಬೆಲೆ ರೂ. 375.00
ಸಮೀಕ್ಷೆ : ಡಾ. ಗಣೇಶ ಎಸ್. ಉಪಾಧ್ಯ, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ

**ಕೆ.ವಿ. ಸುಬ್ಬಣ್ಣ ಅವರಿಗೆ**
**'ಪದ್ಮಶ್ರೀ' ಪ್ರಶಸ್ತಿ**

ಕೆ.ವಿ. ಸುಬ್ಬಣ್ಣ ಅವರು ಗೈದ ಸಾಂಸ್ಕೃತಿ ಪರಿಚಾರಿಕೆಯನ್ನು ಗಮನಿಸಿ ಕೇಂದ್ರ ಸರಕಾರ ಈ ಬಾರಿ ಪರತಿಷ್ಠಿತ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅವರುಗೆ ನೇಸರು ಪರವಾಗಿ ಹಾರ್ದಿಕ ಅಭಿನಂದನೆಗಳು. ಕೆ.ವಿ. ಸುಬ್ಬಣ್ಣ ಅವರು ನಾಟಕಕಾರರಾಗಿ, ಲೇಖಕರಾಗಿ, ನಿನಾಸಂನ ರೂವಾರಿಯಾಗಿ, ಕೃಷಿಕರಾಗಿ, ರಂಗತಜ್ಞರಾಗಿ ಗೈದ ಸಾಧನೆ ಅಪೂರ್ವವಾದುದು. ಅವರ ಇತ್ತೀಚಿನ ಕೃತಿಯ ಕಿರು ಸಮೀಕ್ಷೆ ಇಲ್ಲಿದೆ.

ಕೆ.ವಿ. ಸುಬ್ಬಣ್ಣ ಅವರು ಕರ್ನಾಟಕದ ಶ್ರೇಷ್ಠ ಬರಹಗಾರರಲ್ಲಿ ಒಬ್ಬರು. ಅವರು ಬಹುಶ್ರುತರು. ಸೃಜನ, ಸೃಜನೇತರ ಈ ಎರಡೂ ಪ್ರಕಾರಗಳಲ್ಲೂ ಸಮಾನ ಪ್ರತಿಭೆ ಪ್ರಭುತ್ವವನ್ನು ಮೆರೆದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಅವರದು ಸುಸಂಸ್ಕೃತ ವ್ಯಕ್ತಿತ್ವ, ಏಷ್ಯಾದ ನೊಬೆಲ್ ಬಹುಮಾನ ಎಂದೆ ಗುರುತಿಸಲ್ಪಡುವ ಮ್ಯಾಗ್‌ಸೆಸೆ ಪ್ರಶಸ್ತಿಗೆ ಪಾತ್ರರಾದ ಸುಬ್ಬಣ್ಣ ಕನ್ನಡನಾಡು ನುಡಿ ಸಾಹಿತ್ಯ ಸಂಸ್ಕೃತಿಯ ಬಣ್ಣ ಬನಿಯನ್ನು ಗಾಢಗೊಳಿಸಲು ಅವಿರತವಾಗಿ ಪ್ರಯತ್ನಿಸುತ್ತಾ ಬಂದವರು. ಅವರ ಅನನ್ಯ ವ್ಯಕ್ತಿತ್ವದ ಅಭಿವ್ಯಕ್ತಿಗಳು ಅವರ ಕೃತಿಗಳು ಎಂದರೂ ತಪ್ಪಿಲ್ಲ. ಬರವಣಿಗೆ ಮತ್ತು ಮಾತಿನ ನಡುವೆ ವಿರೋಧಾಭಾಸ ಕಾಣುವ ಇವತ್ತಿನ ಸಂದರ್ಭದಲ್ಲಿ ಅವರು ಒಬ್ಬ ಅಪರೂಪದ ಲೇಖಕರಾಗಿ, ಚಿಂತಕರಾಗಿ ನಮ್ಮ ಗಮನ ಸೆಳೆಯುತ್ತಾರೆ. ವೃತ್ತಿಯಲ್ಲಿ ಕೃಷಿಕರಾಗಿರುವ, ಪ್ರವೃತ್ತಿಯಲ್ಲಿ ಸಾಹಿತ್ಯ, ಸಾಂಸ್ಕೃತಿಕ ಪರಿಚಾರಿಕೆಯಲ್ಲಿ ನಿರತರಾಗಿರುವ ಸುಬ್ಬಣ್ಣ ಅವರದು ವಿಶಿಷ್ಟ ಛಾಪು.

'ಅರೆ ಶತಮಾನದ ಅಲೆ ಬರಹಗಳು'' ಕೆ.ವಿ. ಸುಬ್ಬಣ್ಣ ಅವರ ಇತ್ತೀಚಿನ ಕೃತಿ. ಇದನ್ನು ಟಿ.ಪಿ. ಅಶೋಕ ಅವರು ಸಂಪಾದಿಸಿಕೊಟ್ಟಿದ್ದಾರೆ. 1954ರಿಂದ 2004ರವರೆಗೆ ಸುಬ್ಬಣ್ಣ ಅವರು ಬರೆದ ಬರಹಗಳು ಇಲ್ಲಿವೆ. ನಮ್ಮ ಸಮಕಾಲೀನ ಜಗತ್ತಿಗೆ ಸ್ಪಂದಿಸಿದ ಫಲ ಈ ಬೃಹದ್ಗ್ರಂಥ, ಸುಬ್ಬಣ್ಣ ಅವರದು ನಾನಾ ಬಗೆಯ ವ್ಯಕ್ತಿತ್ವ. ಅವರು ಹತ್ತು ಹಲವು ವಿಷಯಗಳಲ್ಲಿ ಆಸಕ್ತರು. ಸಾಹಿತ್ಯ ಬರೀ ಜನಜೀವನದ ಪ್ರತಿಬಿಂಬವಷ್ಟೇ ಅಲ್ಲ; ಅದು ಜನ ಬದುಕಿನ ಪ್ರತಿಮಾ ವಿಧಾನವೂ ಹೌದು ಎಂಬುದಕ್ಕೆ ಸುಬ್ಬಣ್ಣ ಅವರ ಇಲ್ಲಿನ ಲೇಖನಗಳೇ ಸಾಕ್ಷಿ. ನಮ್ಮ ವರ್ತಮಾನದ ಬದುಕನ್ನು ಪ್ರತಿಮಾ ವಿಧಾನದ ಮೂಲಕ ಅವರು ಸೆರೆಹಿಡಿದಿರುವುದು ಉಲ್ಲೇಖನೀಯ ಅಂಶ. ಈ ಬೃಹತ್ ಕೃತಿಯಲ್ಲಿ ಸಮಾಜ, ಸಂಸ್ಕೃತಿ, ಸಾಹಿತ್ಯ, ಕಲೆಗಳು, ವ್ಯಕ್ತಿಗಳು, ಕೃತಿಗಳು ಎಂಬ ಆರು ಒಳತೆನೆಗಳಿವೆ; 88 ಲೇಖನಗಳಿವೆ.

ಬದುಕನ್ನು ಒಂದೇ ಮುಖವಾಗಿ ತಿರುಗಿಸಿ ಏಕಮೇವ ಧ್ಯೇಯ ಸಾಧನೆಗಾಗಿ ಅವಿರತ ದುಡಿಯುವ ಸ್ವಭಾವ ಸುಬ್ಬಣ್ಣ ಅವರದಲ್ಲ. ಅವರ ಲೇಖನ ಕೃಷಿಯಲ್ಲಿಯೂ ಈ ಅಂಶ ಢಾಳಾಗಿ ಕಾಣಸಿಗುತ್ತದೆ. ಈ ಕೃತಿಯನ್ನು ಸಂಪಾದಿಸಿಕೊಟ್ಟ ವಿಮರ್ಶಕ ಟಿ.ಪಿ. ಅಶೋಕ ಅವರೂ ಈ ಅಂಶವನ್ನು ಗುರುತಿಸಿದ್ದಾರೆ. ''ಕೆ.ವಿ. ಸುಬ್ಬಣ್ಣನವರು ಸ್ವತಃ ಕಾವ್ಯ ನಾಟಕಗಳನ್ನು ರಚಿಸಿದ್ದಾರೆ. ಹತ್ತಾರು ಸಂಸ್ಕೃತ ನಾಟಕಗಳನ್ನು ಪಾಶ್ಚಾತ್ಯ ನಾಟಕಗಳನ್ನು ಅನುವಾದಿಸಿದ್ದಾರೆ. ದಶರೂಪಕ, 'ರಂಗದಲ್ಲಿ ಅಂತರಂಗ'ದಂಥ' ಬೃಹತ್ ಗ್ರಂಥ'ಗಳನ್ನು ಅನುವಾದಿಸಿದ್ದಾರೆ. ಗಾಂಧಿ, ಲೋಹಿಯಾ, ಗೋರ್ಕಿ, ಐಸೆನ್‌ಸ್ಟೈನ್ ಕುರಾಸವ ಮುಂತಾದವರನ್ನು ಕನ್ನಡಕ್ಕೆ ತಂದಿದ್ದಾರೆ. ಚಲನಚಿತ್ರಕ್ಕೆ ಸಂಬಂಧಪಟ್ಟಂತೆ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಚಿತ್ರ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಬರಹಗಳನ್ನು ವರ್ಗೀಕರಿಸು ವುದು ತುಸುಕಷ್ಟವೇ. ಸುಬ್ಬಣ್ಣನವರ ಆಸಕ್ತಿಗಳು ಹಲವು ಕ್ಷೇತ್ರಗಳಲ್ಲಿ ವ್ಯಾಪಿಸಿಕೊಂಡಿರುವುದರಿಂದ ಮೇಲುನೋಟಕ್ಕೆ ಕಾಣುವ ಸಂಗತಿಗಳಾಗಿದ್ದರೂ ಅವುಗಳ ಒಳ, ಸಾವಯುವ ಸಂಬಂಧಗಳ ಸಂಕೀರ್ಣ ಜಾಲವೂ ಅಷ್ಟೇ ಸತ್ಯ. ನನ್ನ ಮಟ್ಟಿಗೆ ಹೇಳುವುದಾದರೆ ಇದೊಂದು ವಾಙ್ಮಯ; ಕಥನ. ಒಟ್ಟಾರೆ ನಮ್ಮ ಸಮಕಾಲೀನ ಜೀವನ ಸಂದರ್ಭಕ್ಕೆ ಒಂದು ಶ್ರೇಷ್ಠ, ಧೀಮಂತ, ಸೃಜನಶೀಲ ಮನಸ್ಸು ಪ್ರತಿಸ್ಪಂದಿಸಿದ ಮಹಾದಾಖಲೆ.

ಇವತ್ತಿನ ಬದುಕಿನ ಸಮಸ್ಯೆಗಳ ಆಳಅಗಲಗಳನ್ನು ಗಂಭೀರವಾಗಿ ಗಮನಿಸುವ ಸುಬ್ಬಣ್ಣ ಅವರ ಸಮಕಾಲೀನ ಪ್ರಜ್ಞೆಯಿಂದಾಗಿ ಈ ಲೇಖನಗಳಲ್ಲಿ ಒಂದು ವಿಶಿಷ್ಟ ರೀತಿಯ ಜೀವಂತಿಕೆ, ಲವಲವಿಕೆಯಿದೆ. ಬದುಕನ್ನು ಕೆಡಿಸುವ ಪ್ರವೃತ್ತಿಗಳನ್ನು ಅವರು ಮುಲಾಜಿಲ್ಲದೆ ಖಂಡಿಸಿರುವುದು ಮಹತ್ವದ ಅಂಶ. ಅವರದು ಪ್ರಗತಿಪರ ದೃಷ್ಟಿಕೋನ, ಜನಪರ ನಿಲುವು. ''ಸರಕಾರಿ ಭೂಮಿ ಪಂಚಾಯತ್‌ಗಳ ಒಡೆತನಕ್ಕೆ ಒಳಪಡಬೇಕು. ಕರ್ನಾಟಕ ಸರಕಾರ ರೈತರ ನೋವು ನಲಿವುಗಳಿಗೆ ಸ್ಪಂದಿಸಬೇಕು. ವಿಕೇಂದ್ರಿಕೃತ ಪಂಚಾಯತ್ ರಾಜ್ಯದ ಮೂಲಕಲ್ಪನೆಯಲ್ಲೇ ಆಯಾ ಗ್ರಾಮದ ಭೂಮಿ ಆಯಾ ಗ್ರಾಮದ (ಜನಸಮುದಾಯದ) ಸಾಮೂಹಿಕ ಸ್ವತ್ತು ಎಂಬ ದೃಢ ನಂಬಿಕೆ ಇರತಕ್ಕದ್ದು. ಈ ಒಡೆತನದ ಮೂಲಕ ಈಗಷ್ಟೇ ಜನ್ಮತಾಳಿರುವ ಪಂಚಾಯತ್‌ಗಳಿಗೆ ಭದ್ರವಾದ ಅಸ್ತಿವಾರ ಹಾಕಿಕೊಟ್ಟಂತಾಗುತ್ತದೆ. ಒಂದು ಇಲಾಖೆಗೋ ಕಾರ್ಪೋರೇಶನ್‌ಗೋ ಇಡೀ ರಾಜ್ಯದ ಬಂಜರು ಅಷ್ಟನ್ನು ರೂಢಿಸುವ ಅತ್ಯಂತ ವ್ಯಾಪಕ ಕಾರ್ಯಕ್ರಮ ವಹಿಸಿ ಕೊಟ್ಟರೆ, ಭ್ರಷ್ಟಾಚಾರದ ಉತ್ಪಾದನೆಗೆ ಹೊಸ ಬೃಹತ್ ಕಾರ್ಖಾನೆಯೊಂದನ್ನು ಸ್ಥಾಪಿಸಿದಂತೆಯೇ ಹಾಗೇನಾದರೂ ಆದರೆ, ರೈತರೆಲ್ಲ ಆ ಅಧಿಕಾರಿಗಳ ಮರ್ಜಿಗೆ ಗುಲಾಮರಾಗಿಯೇ ಬದುಕಬೇಕಾಗುತ್ತದೆಂಬುದು ನಿಶ್ಚಿತ (''ಪುಟ 41'')

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಯಿರುವ ಲೇಖಕರು ಪಂಚಾಯತ್ ರಾಜ್‌ನಂತ ಒಂದು ಹೊಸ ವ್ಯವಸ್ಥೆಯನ್ನು ಹೇಗೆ ಬಲಗೊಳಿಸಬಹುದು; ಸಮೃದ್ಧಗೊಳಿಸಬಹುದು ಎಂಬುದನ್ನು ವಾಸ್ತವಿಕ ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ. ಸ್ವಾತಂತ್ರ್ಯಾ ನಂತರ ದೇಶ ಹಿನ್ನಡೆ ಕಾಣಲು ಅವರು ಕೊಡುವ ಕಾರಣಗಳು. ಅದೆಷ್ಟು ಸತ್ಯಾಂಶಗಳಿಂದ ಕೂಡಿವೆ, ನೋಡಿ. ''ಒಂದು ದೇಶ ಸಮೃದ್ಧವಾಗಬೇಕು ಎನ್ನುವುದು; ಇನ್ನೊಂದು, ಬಡತನ ನಿವಾರಣೆಯಾಗಬೇಕು ಎನ್ನುವುದು ಈ ಎರಡೂ ಉದ್ದೇಶಗಳನ್ನು ನಾವು ಪ್ರತ್ಯೇಕ ಎರಡಾಗಿ ಇಟ್ಟುಕೊಂಡು ಯೋಚಿಸಿದೆವು. ಅವೆರಡನ್ನೂ ಏಕತ್ರವಾಗಿ ಯೋಚಿಸಲಿಲ್ಲ. ಇದರಿಂದ ಒಂದು ಉದ್ದೇಶಕ್ಕಾಗಿ ಯೋಜಿಸಿದ ಪರಿಹಾರ ಇನ್ನೊಂದು ಉದ್ದೇಶವನ್ನು ಭಂಗಗೊಳಿಸುವಂತಾಯಿತು. ಇಂಥ ತಪ್ಪು ಮತ್ತೆ ಆಗದಂತೆ ನೋಡಿಕೊಳ್ಳಬೇಕು (ಪುಟ 45) ಇಲ್ಲೆಲ್ಲ, ಒಬ್ಬ ಪ್ರಭಾವಂತ ನಾಗರಿಕ ತಾನು ಚುನಾಯಿಸಿದ ಸರಕಾರಕ್ಕೆ ಆಡಳಿತಕ್ರಮಕ್ಕೆ ಹೇಗೆ ಸಲಹೆ ಸೂಚನೆಗಳನ್ನು ಕೊಡುವುದರ ಮೂಲಕ ಸರಕಾರದಿಂದ ವಿಧಾಯಕ ಕೆಲಸವನ್ನು ಮಾಡಿಸಬೇಕೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಕುವೆಂಪುರವರು ತಮ್ಮ ಕೃತಿಯಲ್ಲಿ ಒಂದು ಕಡೆ 'ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ' ಎಂಬುದಾಗಿ ಹೇಳಿಕೊಂಡಿದ್ದಾರೆ. ನಮ್ಮ ಸುಬ್ಬಣ್ಣ ಅವರಿಗೂ ಅಷ್ಟೇ. ಅವರು ಸರ್ವ ಕುತೂಹಲಿ. ಅವರದು ತೆರೆದ ಕಣ್ಣು, ತೆರೆದ ಮನಸ್ಸು. ಅವರು ಸರ್ವಗಾಮಿ ಎಂಬುದನ್ನು ಅವರ ಈ ಕೃತಿ ಶ್ರುತ ಪಡಿಸುತ್ತದೆ. 1992ರಲ್ಲಿ ಅವರು ಪತ್ರಿಕೆಯೊಂದಕ್ಕೆ ಬರೆದ ಪತ್ರದ ಶಿರೋನಾಮೆ ಜಪಾನಿ ವಸಾಹತು ಬಂದು ಪತ್ರ. ಜಪಾನ್‌ದೇಶ ಬಂಡವಾಳ ಹೂಡುವ ನೆಪದಲ್ಲಿ ಬೆಂಗಳೂರಿನ ಬಳಿ ತಮ್ಮದೇ ಆದ ಜಾನಿಯಾ ಮಾಹಿತನ್ನು ನಿರ್ಮಿಸುವ ಕುರಿತಾದ ವಿಚಾರ.

ಜಡವಾಗಿರುವ ಕನ್ನಡಿಗರನ್ನು ತಮ್ಮ ಲೇಖನಿ ಎಂಬ ಅಂಕುಶದಿಂದ ತಿವಿದು ಎಚ್ಚರಿಸುತ್ತಾರೆ. ಜಪಾನಿಗಳು ದೊಡ್ಡ ಬಂಡವಾಳ ಹೊತ್ತು ತಂದು ಇಲ್ಲಿ ಸುರಿಯುತ್ತಾರೆ.

ನಿಜ ಆದರೆ ಆ ಬಂಡವಾಳ ನಮ್ಮನ್ನು ಹೀರಿ ನಶೆಯನ್ನು ನೇರ ಜವಾನಿಗೆ ರವಾನಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ನಮ್ಮವರು ಅವರ ತಾಂತ್ರಿಕತೆಯ ಗುಲಾಮರಾಗುತ್ತಾರೆ. ಸ್ವಾತಂತ್ರ್ಯಹೀನರಾಗುತ್ತಾರೆ. (ಅದೇ ಪುಟ) ನಾವು ಸದಾ ಎಚ್ಚರದಲ್ಲಿದ್ದುಕೊಂಡು ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕು. ಮನುಷ್ಯ ಮನುಷ್ಯನ ಗುಲಾಮನಾಗಬಾರದು. ಜಾಗತೀಕರಣದ ಸಂದರ್ಭದಲ್ಲಿ ನಾವು ನಮ್ಮ ಅಸ್ಮಿತೆಯನ್ನು ಕಳೆದುಕೊಂಡರೆ ನಾವು ಇದ್ದೂ ಸತ್ತಂತೆ ಎಂಬ ದೃಢ ನಿಲುವು ಅವರದು.

ಸುಬ್ಬಣ್ಣ ಅವರು ಚಿಂತನಶೀಲರು. ಒಡಲನೂಲಿನಿಂದ ಜೇಡ ನೇಯುವಂತೆ ಜಾಲ ಅವರು ತಮ್ಮೊಳಗಿನ ಜೀವಂತ ಅನುಭವ ಸಾಮಗ್ರಿಯನ್ನು ಇಲ್ಲಿನ ಲೇಖನಗಳಲ್ಲಿ ವಿವಿಧ ದೃಷ್ಟಾಂತಗಳೊಂದಿಗೆ ಅನಾವರಣಗೊಳಿಸಿದ್ದಾರೆ. ಗ್ರಾಹಕ ಚಳುವಳಿಗೆ ಎಚ್ಚರಬೇಕು ಎಂಬ ಬರವಣಿಗೆಯಲ್ಲಿ ಮನುಷ್ಯನಿಂದ ಸರಕಾಗುತ್ತಿರುವ ಬಗೆಗೆ ಸೂಕ್ಷ್ಮವಾಗಿ ವಿವರಿಸಿದ್ದಾರೆ. ''ವಾಣಿಜ್ಯ ಸಂಸ್ಕೃತಿಯ ದಬ್ಬಾಳಿಕೆಯಿಂದ ಏನೆಲ್ಲ ಅನಾಹುತ ಸಂಭವಿಸುತ್ತದೆ ಎಂಬುದನ್ನು ಹೀಗೆ ತೋಡಿಕೊಂಡಿದ್ದಾರೆ'' ಹಣದಿಂದ ಅಳೆಯಲಿಕ್ಕೆ ಬಾರದ ಅಥವಾ ಯಾವುದರಿಂದಲೂ ಅಳೆಯಲಿಕ್ಕೆ ಬಾರದ ಮಾನವ ಸೂಕ್ಷ್ಮಗಳು ತಮ್ಮ ವೈಶಿಷ್ಟ್ಯ ಕಳೆದುಕೊಳ್ಳುತ್ತವೆ. ಅವು ಕ್ರಮೇಣ ಅನಗತ್ಯವೆನ್ನಿಸುತ್ತ, ಮೆಲ್ಲಗೆ ಮರೆಯಾಗುತ್ತವೆ. ಮನುಷ್ಯ ಜೀವನವೆಲ್ಲ ಕೇವಲ ಹಣದ ಪರ್ಯಾಯವಾಗಿ ಕೇವಲ ವಸ್ತು ಭೋಗದ ಸಂಗತಿಯಷ್ಟೇ ಆಗುತ್ತದೆ ಎನ್ನುತ್ತಾ ತಮ್ಮ ಬಾಲ್ಯದ ಒಂದು ಉದಾಹರಣೆಯನ್ನು ಹೀಗೆ ನೆನಪಿಸಿಕೊಂಡಿದ್ದಾರೆ. ಬಹಳ ಹಿಂದೆ ನನ್ನ ಬಾಲ್ಯದಲ್ಲಿ ಒಮ್ಮೆ ನಮ್ಮ ಊರಲ್ಲಿ ಒಂದು ಪಂಚಾಯತಿ ಸೇರಿತ್ತು. ಒಬ್ಬ ದಾರಿ ತಪ್ಪಿದ ತರುಣನು ನಿಷ್ಕಾರಣವಾಗಿ ಊರಿನ ಸ್ವತ್ತನ್ನು ನಾಶಕಪಡಿಸಿದ್ದರಿಂದ ಅವನಿಗೆ ತಕ್ಕ ಶಿಕ್ಷೆಯನ್ನು ನಿರ್ಧರಿಸಬೇಕಿತ್ತು. ವಿಧಿಸಬೇಕಾದ ದಂಡದ ಮೊಬಲಗಿನ ಬಗ್ಗೆ ಭಾರೀ ವಾಗ್ವಾದ ಚರ್ಚೆಗಳು ನಡೆದವು. ಆಗ ವೃದ್ಧರೊಬ್ಬರು ಮುಂದಕ್ಕೆ ಬಂದು ಹೇಳಿದರು. ದುಡ್ಡು ಗಿಡ್ಡು ಬೇಡ, ಅವನನ್ನು ಇಲ್ಲಿ ಕರೆಸಿ ಹತ್ತು ಜನರ ಎದುರು ಹುಚ್ಚುಮುಂಡೆಗಂಡ ಅಂದು ಬಿಡೋಣ ಅಂತ. ನಾವೆಲ್ಲ ನಕ್ಕಿದ್ದೆವು. ನಮ್ಮ ಹೊಸ ಜೀವನಕ್ರಮ ಮತ್ತು ಇದರಿಂದ ಬರುವ ನಂಬಿಕೆಗಳ ಹಿನ್ನೆಲೆಯಲ್ಲಿ ಆ ವೃದ್ಧರ ಮಾತು ನಮಗೆ ಅರ್ಥವಾಗುವುದು ಸಾಧ್ಯವಿರಲಿಲ್ಲ (ಪುಟ 106) ಎಂಬುದಾಗಿ ತಮ್ಮನ್ನು ಸೇರಿಸಿಕೊಂಡು ಆತ್ಮವಿಶ್ಲೇಷಣೆ ಮಾಡಿಕೊಂಡಿದ್ದಾರೆ. ಹಣವನ್ನು ಬಿಟ್ಟು ಯೋಚಿಸುವುದು, ತುಲನೆ ಮಾಡುವುದು, ಬೆಲೆ ಕಟ್ಟುವುದು, ವ್ಯವಹರಿಸುವುದು, ಕೊಡುವುದು, ಕೊಳ್ಳುವುದು ನಮಗೆ ಸಾಧ್ಯವಾಗಬೇಕು. ಬಹುಮಟ್ಟಿಗೆ ಕಳೆದುಕೊಂಡಿರುವ ಅಂಥ ನಂಬಿಕೆಯನ್ನು ಪುನಃ ನೆಟ್ಟು ಬೆಳೆಸಬೇಕಾದ್ದು ಇವತ್ತಿನ ತುರ್ತು (ಪುಟ 106) ಎಂಬ ಮಾತನ್ನು ಹೇಳಲು ಅವರು ಮರೆಯುವುದಿಲ್ಲ.

ಭಾಗ ಎರಡರಲ್ಲಿ ಸಾಂಸ್ಕೃತಿಕ ಲೋಕಕ್ಕೆ ಸಂಬಂಧಿಸಿದ ಬರಹಗಳಿವೆ. ಕನ್ನಡ ಭಾಷೆ, ಸಾಹಿತ್ಯ ಸಂಘಟನೆ, ಶಿಕ್ಷಣ, ಪ್ರಶಸ್ತಿ, ಉತ್ಸವಗಳು ಹೀಗೆ ಹತ್ತಾರು ವಿಷಯಗಳನ್ನು ವಿಶ್ಲೇಷಣೆಗೊಳಪಡಿಸಿದ್ದಾರೆ. ಶ್ರೇಷ್ಠತೆಯ ವ್ಯಸನ ಈ ಕೃತಿಯ ಬಹುಮುಖ್ಯ ಲೇಖನಗಳಲ್ಲಿ ಒಂದು. ಶ್ರೇಷ್ಠತೆಯ ವ್ಯಸನ ಯಾರಿಗೂ ಸಲ್ಲದು ಅದು ಪ್ರತ್ಯೇಕತೆ, ಭಿನ್ನತೆ, ಅಯ್ಕೆ, ಸಂಕರ ಭಯ ಇತ್ಯಾದಿಗಳನ್ನು ಅತಿರೇಕಕ್ಕೊಯ್ಯುವ ಉನ್ಮಾದವಾಗುತ್ತದೆ. ಸಮತ್ವವನ್ನು ತಪ್ಪಿಸಿಬಿಡುತ್ತದೆ ಎನ್ನುತ್ತಾ ತಮ್ಮ ಗುರುಗಳಾದ ಪರಮೇಶ್ವರ ಭಟ್ಟರು ಹೇಳಿದ ಒಂದು ಕತೆಯನ್ನು ಸ್ವಾರಸ್ಯಪೂರ್ಣವಾಗಿ ನಿರೂಪಿಸಿದ್ದಾರೆ. ಒಬ್ಬ ವೃದ್ಧನು ತನ್ನ ಮಗನ ಶ್ರೇಷ್ಠ ಸಾಧನೆಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದನಂತೆ. ಆತ ಎರಡೇ ವರ್ಷದಲ್ಲಿ ಪ್ರೈಮರಿ ನಾಲ್ಕೂ ತರಗತಿಗಳನ್ನು ಮುಗಿಸಿದ, ಎಸ್.ಎಸ್.ಎಲ್.ಸಿ.ಯಲ್ಲಿ ರಾಜ್ಯಕ್ಕೇ ಪ್ರಥಮವಾಗಿ ರ್‍ಯಾಂಕ್ ಪಡೆದುಕೊಂಡ. ಬಿ.ಎ.ದಲ್ಲಿ ಪ್ರಥಮ ರ್‍ಯಾಂಕ್ ಪಡೆದು ಆರು ಚಿನ್ನದ ಪದಕಗಳನ್ನು ಹೊಡೆದುಕೊಂಡ. ಒಂದಲ್ಲ ಐದು ವಿಷಯಗಳಲ್ಲಿ ಮಾಸ್ಟರ್ ಡಿಗ್ರಿ ಪಡೆದುಕೊಂಡ, ಪ್ರತಿಯೊಂದರಲ್ಲಿಯೂ ಪುನಃ ರ್‍ಯಾಂಕ್ ಜತೆಗೆ ಹೊಸ ದಾಖಲೆ ಸ್ಥಾಪಿಸಿದ್ದ ಇತ್ಯಾದಿ. ಕೇಳಿದವನಿಗೆ ಆಶ್ಚರ್ಯವಾಯಿತು. ಇಂಥಾ ಮೇಧಾವಿ ಈಗ ಯಾವ ಕ್ಷೇತ್ರದಲ್ಲಿ ಏನಾಗಿರಬಹುದು ಎಂದು ಕುತೂಹಲ ಹುಟ್ಟಿ ಆತನನ್ನೇ ಕೇಳಿದನಂತೆ. ಈಗ ನಿಮ್ಮ ಮಗ ಏನಾಗಿದ್ದಾನೆ? ಅಂತ. ಅದಕ್ಕೆ ಆತ 'ಮುದುಕನಾಗಿದ್ದಾನೆ' ಅಂದನಂತೆ. (ಪುಟ 142) ಕಣ್ಣು ಪಟ್ಟಿಕಟ್ಟಿಕೊಂಡ ಶ್ರೇಷ್ಠತೆಯ ವ್ಯಸನ ಅದೆಂಥ ವಿಕಾರಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಮನೋಜ್ಞವಾಗಿ ಅನೇಕ ದೃಷ್ಟಾಂತಗಳಿಂದ ವಿವರಿಸಿದ್ದಾರೆ. ಇಲ್ಲೆಲ್ಲ ಸುಬ್ಬಣ್ಣ ಅವರ ಗದ್ಯ ಕಲಾತ್ಮಕವಾಗಿದೆ. ಕಾವ್ಯಾತ್ಮಕವಾಗಿದೆ. ಗದ್ಯಗೀತೆಯೂ ಆಗಿದೆ! ತಮ್ಮ ವಿವೇಕ, ವಿವೇಚನೆಗಳನ್ನು ಇಲ್ಲಿ ಅವರು ಧಾರೆಯೆರೆದಿರುವ ಪರಿಭಿನ್ನ.

ಸುಬ್ಬಣ್ಣ ಅವರು ಹತ್ತು ಹಲವು ವಿಷಯಗಳಲ್ಲಿ ಆಸಕ್ತರು ಎಂಬ ಮಾತನ್ನು ಈಗಾಗಲೇ ನೋಡಿದ್ದೇವೆ. ಆ ವಿಷಯಗಳೆಲ್ಲೆಲ್ಲ ಅವರು ಅಧ್ಯಯನಶೀಲರು. ಈ ಆಳವಾದ ಅಭ್ಯಾಸ ಅವರ ಬರವಣಿಗೆಗೆ ದೃಢತೆಯನ್ನೊದಗಿಸಿದೆ. ಈ ಲೇಖನಗಳನ್ನು ಓದುತ್ತಾ ಹೋದಂತೆ ಒಂದಂಶ ಸ್ಪಷ್ಟವಾಗುತ್ತದೆ. ಇವು ಸಂತೆಯ ಹೊತ್ತಿಗೆ ಮೂರು ಮೊಳ ನೇಯ್ದವುಗಳಲ್ಲ ಎಂಬುದಾಗಿ. ಸುಬ್ಬಣ್ಣ ಅವರ ಓದಿನ ಹರಹು ವ್ಯುತ್ಪತ್ತಿ ಬಲಕ್ಕೆ ಒಂದು ಉದಾಹರಣೆ ಕವಿರಾಜ ಮಾರ್ಗವು ನಿರ್ಮಿಸಿದ ಕನ್ನಡ ಜಗತ್ತು ಎಂಬ 91 ಪುಟಗಳ ಸುದೀರ್ಘ ಲೇಖನ. ಇದು ಈ ಹಿಂದೆ ಕೃತಿರೂಪದಲ್ಲಿಯೂ ಬೆಳಕುಕಂಡಿತ್ತು. ಕವಿರಾಜಮಾರ್ಗವನ್ನು ನಾನು ವಿದ್ವಾಂಸರ ಶ್ರಮದ ನೆರವಿನಿಂದ ಓದುತ್ತ ಬಂದದ್ದಲ್ಲದೆ, ಅವರದಕ್ಕೆ ಕೂಡಿಸಬಹುದಾದ ಹೊಸ ಪಾಂಡಿತ್ಯ ಸಂಶೋಧನೆಗಳು ನನ್ನಲ್ಲಿಲ್ಲ ಎಂಬ ಪ್ರಾಮಾಣಿಕ ಮಾತುಗಳನ್ನು ಆಡುತ್ತಲೇ ಕವಿರಾಜ ಮಾರ್ಗವನ್ನು ಪ್ರವೇಶಿಸಬಹುದಾದ ಒಂದು ಹೊಸ ಕ್ರಮವನ್ನು ಕೃತಿನಿಷ್ಠವಾಗಿ ತೋರಿಸಿ ಕೊಟ್ಟಿದ್ದಾರೆ.

ಮುಳಿಯ ತಿಮ್ಮಪ್ಪಯ್ಯ ಅವರನ್ನು ಬಿಟ್ಟರೆ ಇಷ್ಟು ವಿಸ್ತೃತವಾಗಿ ಕವಿರಾಜ ಮಾರ್ಗವನ್ನು ವಿಭಿನ್ನ ನೆಲೆಗಳಲ್ಲಿ ವಿಶ್ಲೇಷಿಸಿದವರು ಸುಬ್ಬಣ್ಣ ಮಾತ್ರ. ಒಂದು ಸಾವಿರ ವರ್ಷಗಳ ಕನ್ನಡ - ಭಾರತ - ದಕ್ಷಿಣ ಭಾರತಗಳ ಇತಿಹಾಸದ ಹಿನ್ನೆಲೆಯಲ್ಲಿಟ್ಟು ನೋಡಿದ ಕ್ರಮ ವಿನೂತನವಾಗಿದೆ. ಅವರ ಪ್ರತಿಭೆ, ಪಾಂಡಿತ್ಯ, ವಿದ್ವತ್ತು ಇಲ್ಲಿ ಯಾರ ಗಮನಕ್ಕೂ ಬಾರದೇ ಹೋಗದು. ಕವಿರಾಜಮಾರ್ಗ ಕೃತಿಯ ಶೀರ್ಷಿಕೆಯನ್ನು ಅವರು ಬೇರೆ ರೀತಿಯಲ್ಲಿ ಅರ್ಥೈಸುತ್ತಾರೆ'' ಕವಿ (ಮತ್ತು) ರಾಜ (ಜಂಟಿಯಾಗಿ ನಿರ್ಮಿಸಿದ) ಮಾರ್ಗ, ಸ್ವತಃ ಕವಿಯಾಗಿರುವ ರಾಜ (ಕವಿರಾಜ)ನು ನಿರ್ಮಿಸಿದ ಭಾಗ, ಇವುಗಳಲ್ಲಿ ಕವಿ ಮತ್ತು ರಾಜ ಜಂಟಿಯಾಗಿ ನಿರ್ಮಿಸಿದ ರಾಜ ಮಾರ್ಗ ಎನ್ನುವುದನ್ನು ಮುಖ್ಯಾರ್ಥವಾಗಿಯೂ ಉಳಿದವನ್ನು ಅದರ ಉಪಾರ್ಥ ಧ್ವನಿಗಳಾಗಿಯೂ ಗ್ರಹಿಸಬೇಕು'' ಎಂಬ ಎರಡು ಹೊಸ ಸಾಧ್ಯತೆಗಳನ್ನು ತೋರಿಸಿ ಕೊಟ್ಟಿದ್ದಾರೆ. ಈ ಕುರಿತು ಹೆಚ್ಚಿನ ಸಂವಾದಕ್ಕೂ ಅವರು ದಾರಿಮಾಡಿ ಕೊಟ್ಟಿದ್ದಾರೆ. ಕವಿಯೂ (ಶ್ರೀ ವಿಜಯ) ರಾಜನೂ (ನೃಪತುಂಗ) ಕೂಡಿಕೊಂಡು ಭಾವ ಕನ್ನಡ ಭವ ಕನ್ನಡಗಳ ಸಂಯುಕ್ತ ಸೃಷ್ಟಿಗೆ ಕೈಹಾಕಿರುವುದನ್ನು ಮೊದಲಬಾರಿಗೆ ಸೋದಾಹರಣವಾಗಿ ಚರ್ಚಿಸಿರುವುದು ಕುತೂಹಲದ ಸಂಗತಿ.

ನಾಟಕ ಹಾಗೆಂದರೇನು? ನಾಟಕ ಮತ್ತು ಸಿನಿಮಾ, ಯಕ್ಷಗಾನಕ್ಕೆ ಆಶಯ ಭಾಷಣ, ನೀನಾಸಮ್ ಹಿನ್ನೆಲೆಯ ಸೆಲೆ, ರಂಗಭೂಮಿ ಮತ್ತು ಸಮುದಾಯ ಮೊದಲಾದ ಲೇಖನಗಳು ದಿಟ್ಟ ಹಾಗೂ ಖಚಿತ ನಿಲುವನ್ನು ಒಳಗೊಂಡ ಬರಹಗಳಾಗಿವೆ. ಅವರ ವ್ಯಕ್ತಿತ್ವಕ್ಕೆ ತಕ್ಕಂತೆ ಇಲ್ಲಿಯ ಲೇಖನಗಳು ತೂಕಬದ್ಧವಾಗಿವೆ. ವಿಚಾರ ಪರಿಪುಷ್ಟವಾಗಿವೆ. ಗೌರೀಶ ಕಾಯ್ಕಿಣಿ, ಕುರ್ತಕೋಟಿ, ಹಿರಣ್ಣಯ್ಯ, ಡಾ. ಕುಸುಮಾ ಸೊರಬ, ಗೋಪಾಲಗೌಡ, ಮೊದಲಾದ ಸಾಂಸ್ಕೃತಿಕ ವ್ಯಕ್ತಿಗಳ ಬಗೆಗೆ ಬರೆದ ನುಡಿಚಿತ್ರಗಳೂ ಬಹು ಆಪ್ತವಾಗಿವೆ.

ಇಲ್ಲಿಯ ಲೇಖನಗಳಲ್ಲಿ ಸಾಹಿತ್ಯದ ಅನೇಕ ಪ್ರಕಾರಗಳು ಬಂದು ಹೋಗಿರುವುದು ಉಲ್ಲೇಖನೀಯ ವಿಷಯ. ಲಲಿತ ಪ್ರಬಂಧ, ಪ್ರಬಂಧ, ವ್ಯಕ್ತಿಚಿತ್ರ, ಪ್ರವಾಸ ಸಾಹಿತ್ಯ, ಆತ್ಮಚರಿತ್ರೆ ಮೊದಲಾದ ಸಾಹಿತ್ಯ ಪ್ರಕಾರಗಳ ಲಕ್ಷಣಗಳು ಎಲ್ಲೆಡೆ ಹಣಕಿ ಹಾಕಿವೆ. ಅನೇಕ ಕಡೆ ಇವು ಅನುಭವ ಕಥ'ನ, ಆತ್ಮಕಥೆ'ಯಂತೆಯೂ ತೋರಿಬರುವುದುಂಟು. ಉದಾಹರಣೆಗೆ ನೋಡಿ'' ನಾನು ಹುಟ್ಟಿ ಬೆಳೆದದ್ದು ಪಶ್ಚಿಮ ಘಟ್ಟದ ಮೇಲಂಚಿನಲ್ಲಿ. ಅತ್ಯಂತ ವಿರಳ ಜನ ಸಂಖ್ಯೆಯುಳ್ಳ ಗುಡ್ಡ ಬೆಟ್ಟ ಮಳೆಹಸಿರುಗಳ ಪುಷ್ಕಳ ಪ್ರದೇಶದಲ್ಲಿ, ಹವ್ಯಕರೆಂಬ ಬ್ರಾಹ್ಮಣರೊಳಗಿನ ಉಪಜಾತಿ ಸಮುದಾಯ ನಮ್ಮದು. ಈಗ ಸಹಜವಾಗಿ ಎಲ್ಲವೂ ಗುರುತು ಸಿಗದಷ್ಟು ಬದಲಾಗಿದೆ. ಹೇಳಿದರೆ ನಂಬಲಿಕ್ಕೂ ಆಗದಷ್ಟು ಬದಲಾಗಿದೆ. ಕಾಲಕಾಲಕ್ಕೆ ಈ ಜನರು ಕಣಿವೆಯನ್ನು ಹಿಡಿದು ಅಡಿಕೆತೋಟ ಮಾಡಿಕೊಂಡು ಮೂರು ನಾಲ್ಕು ಮನೆಗಳಿರುವ ಚಿಕ್ಕ ಹಳ್ಳಿಗಳಲ್ಲಿ ಬಾಳಿಕೊಂಡಿದ್ದರು. ಇವರಲ್ಲಿ ಹೆಚ್ಚು ಮಂದಿ, ಇಡೀ ಜೀವಮಾನವೂ ಸುತ್ತಣ ಹತ್ತಿಪ್ಪತ್ತು ಮೈಲು ಫಾಸಲೆ ಪರಿಧಿಯನ್ನು ದಾಟದೆ

ನಿಜಕ್ಕೂ ಕೂಪ ಮಂಡೂಕವೇ ಆಗಿ ಬದುಕುತ್ತಿದ್ದರು. ಆಫ್ರಿಕದ ಪುಟ್ಟ ಆದಿಮ ಜನಾಂಗಗಳ ಬಗ್ಗೆ ಕೇಳಿದ್ದೆವಲ್ಲ, ಥೇಟ್ ಅದೇ ಥರ ಇದ್ದರು. ಆದರೆ ಇವರಿಗಿದ್ದ ಸ್ವಲ್ಪ ಮಟ್ಟಿಗಿನ ವೈದಿಕ ಹಿನ್ನೆಲೆಯಲ್ಲಿ, ಪರಂಪರಾದತ್ತ ವೇದ ಇತಿಹಾಸ ಕಾವ್ಯ ಪುರಾಣಗಳ ಮತ್ತು ವಿಶಾಲ ಭಾರತ ವರ್ಷದ ಸಮುದ್ರ ನದಿ ಪರ್ವತ ಪುಣ್ಯಕ್ಷೇತ್ರಗಳ ಸ್ಮೃತಿ ಭಂಡಾರವಿದ್ದಿತ್ತು. ಅವುಗಳಿಂದ ತುಣುಕುಗಳನ್ನೆತ್ತಿ ಕೊಂಡು ನಾಲ್ಕು ಸಾಲುಗಳ ಒಂದು ಸರಳ ಹಾಡಿನಲ್ಲಿ ವಿಶಾಲಾದ್ಭುತವಾದ ಮಹಾಲೋಕವನ್ನೇ ಇವರು ಸೃಷ್ಟಿಸಿ ಕೊಳ್ಳಬಲ್ಲವರಾಗಿದ್ದರು. ಯಕ್ಷಗಾನವು ಅಂಥ ಸೃಜನಶೀಲತೆಗೆ ಒಂದು ದೊಡ್ಡ ಮಾಧ್ಯಮವಾಯಿತು''. ನನಗಾಗಿ ನನ್ನೊಳಗೆ ನನ್ನದೆ ಆದ ಒಂದು ಲೋಕಾ ಕಾರವನ್ನು ಬ್ರಹ್ಮಾಂಡವನ್ನು ಕೂಡಾ ಸೃಜಿಸಿಕೊಳ್ಳುವ ಪರಿಯನ್ನು ನನ್ನ ಸಮುದಾಯ ನನಗೆ ಕಲಿಸಿಕೊಟ್ಟಿತು'' (ಪುಟ 213) ಈ ಕೃತಿಯ ಮನೋವಿಲಾಸ, ಶ್ರದ್ಧೆ, ಕಲ್ಯಾಣ ದೃಷ್ಟಿ, ಸೂಕ್ಷ್ಮತಲ, ಸ್ಪರ್ಶಿತೆ, ಆಲೋಚನೆ ಗಳಿಗೂ ಮಾತುಗಳಿಗೂ ಇರುವ ಘನಿಷ್ಠ ಸಂಬಂಧಗಳಿಂದ ಈ ಲೇಖನಗಳು ಮೇಲ್ಸ್ತರಗತಿಯದೆನಿಸಿವೆ.

ಸುಬ್ಬಣ್ಣ ಅವರ ಶೈಲಿ ಸರಳ, ನೇರ, ಅಷ್ಟೇ ಸ್ಫುಟ, ಅಲ್ಲಿ ಕ್ಲಿಷ್ಟತೆ ಸಂದಿಗ್ಧತೆಗಳಿಗೆ ಎಡೆಯಿಲ್ಲ. ಲಲಿತವಾದ ಬಳಕೆಯ ಮಾತುಗಳು, ನಿರರ್ಗಳವಾಗಿ ಹರಿಯುವ ಮಾತಿನ ಧಾಟಿಯಿಂದಾಗಿ ಈ ಲೇಖನಗಳನ್ನು ಓದುವುದೇ ಒಂದು ಆಪ್ಯಾಯಮಾನ ಅನುಭವ. ಬದುಕಿನ ವಿಕಾಸದ ಗತಿಯನ್ನು ತೆರೆಯುವ ಚಿಂತನೆಗಳ ಕಣಜವಿದಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಮುಖ್ಯ ಕೃತಿಗಳಲ್ಲಿ ಇದೂ ಒಂದು. ಒಂದು ಬಾರಿ ಓದಿ ಆಚೆಯಿಡುವ ಕೃತಿಯಲ್ಲ. ಮತ್ತೆ ಮತ್ತೆ ಓದಿ ನಾವು ನಿದಿಧ್ಯಾಸನ ಮಾಡಿಕೊಳ್ಳಬೇಕು.

ಕೃಪೆ : ಸಂಯುಕ್ತ ಕರ್ನಾಟಕ

## ಶ್ರೀ ತ್ಯಾಗರಾಜರ ಮೇಲೆ ಶ್ರೀ ಪುರಂದರದಾಸರ ಪ್ರಭಾವ

*(ಪುಟ 12ರಿಂದ)*

ಮನದಲ್ಲಿ ಸ್ಮರಿಸುತ್ತಾ ಸುಖಿಸುವೆ) ಎಂದು ಶ್ರೀ ಪುರಂದರದಾಸರಿಗೆ ತಮ್ಮ ಭಕ್ತಿಯನ್ನು ಸೂಚಿಸಿದ್ದಾರೆ. ಕರ್ನಾಟಕ ಸಂಗೀತವನ್ನು ಸೃಷ್ಟಿಸಿ, ಜನರನ್ನು ಭಕ್ತಿ ಮಾರ್ಗಕ್ಕೆ ಕೊಂಡೊಯ್ದು ಸಮಾಜ ಸುಧಾರಣೆಯನ್ನು ಮಾಡಿದ ಈ ಇಬ್ಬರೂ ಸಂಗೀತ ಸಂತರುಗಳಾದ ಶ್ರೀ ಪುರಂದರದಾಸರನ್ನು ನಾರದ ಅವತಾರಿಯೆಂದೂ, ಶ್ರೀ ತ್ಯಾಗರಾಜರನ್ನು ವಾಲ್ಮೀಕಿ ಅವತಾರಿಯೆಂದೂ ಪುರಾಣ ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ.

ವಾದ - ವಿವಾದಗಳೇನೇ ಇರಲಿ. ಈ ಇಬ್ಬರು ಸಂತರೂ ಸಂಗೀತಕ್ಕೆ, ಸಾಹಿತ್ಯಕ್ಕೆ, ಸಮಾಜಕ್ಕೆ ಕೊಟ್ಟ ಕೊಡುಗೆ ಅಪಾರ. ನೂರಾರು ವರ್ಷಗಳಾದರೂ ಈ ಸಂತರ ಕೊಡುಗೆ ಇನ್ನೂ ಜೀವಂತವಾಗಿದ್ದು, ಇದರ ಮಹಿಮೆ ಇನ್ನೂ ಹೆಚ್ಚುತ್ತಿರುವುದಕ್ಕೆ ಅವರ ಕೊಡುಗೆಯ ಮೌಲ್ಯಗಳೇ ಸಾಕ್ಷಿಯೆಂದು ಹೇಳಬಹುದು.

●

# 9ನೇಯ ಅಖಿಲ ಭಾರತ ಕುವೆಂಪು ಸ್ಮಾರಕ ಏಕಾಂಕ ನಾಟಕ ಸ್ಪರ್ಧೆ

### ಉದ್ಘಾಟನಾ ಸಮಾರಂಭ

ಇಂದಿನ ಈ ಸಂಜೆ ಬಹಳ ಸಂತೋಷದ ಹಾಗೂ ಸದಾ ನೆನಪಿಡುವಂತಹ ಸಂಜೆ. ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿದ್ದಾಗ ಕುವೆಂಪು ಅವರ ಬಗ್ಗೆ ಏನಾದರೂ ಮಾಡಬೇಕೆಂಬ ಆಶೆ ಇತ್ತು. ಆ ಆಶೆಯಿಂದಲೇ ಆರಂಭಿಸಿದ ಕುವೆಂಪು ನಾಟಕ ಸ್ಪರ್ಧೆ ಈಗ 9ನೆಯ ವರ್ಷ ಅದ್ದೂರಿಯಾಗಿ ನಡೆಯುತ್ತಿರುವದು ಹಾಗೂ ಅದನ್ನು ಉದ್ಘಾಟಿಸುವ ಭಾಗ್ಯ ನನ್ನದಾಗಿರುವುದರಿಂದ ನನ್ನ ಮನತುಂಬಿ ಬಂದಿದೆ ಎಂದು ಖ್ಯಾತ ರಂಗ ನಟ ಮೋಹನ್ ಮಾರ್ನಾಡ್ ತಿಳಿಸಿದರು.

ಅವರು ಕರ್ನಾಟಕ ಸಂಘದ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಕರ್ನಾಟಕ ಸಂಘ ಯುವ ವಿಭಾಗವು ಆಯೋಜಿಸಿದ ಕುವೆಂಪು ಸ್ಮಾರಕ ಅಖಿಲ ಭಾರತ ಏಕಾಂಕ ನಾಟಕ ಸ್ಪರ್ಧೆಯನ್ನು ದೀಪ ಬೆಳಗಿಸಿ ಉದ್ಘಾಟಿಸಿ ಮಾತಾಡುತ್ತಿದ್ದರು. ಆದರೆ ಇಷ್ಟೊಂದು ಅರ್ಥಪೂರ್ಣವಾಗಿ ನಡೆಯುತ್ತಿರುವ ಈ ಸ್ಪರ್ಧೆಯಲ್ಲಿ ಮುಂಬಯಿಯ ತಂಡಗಳು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸದಿರುವುದು ನಿಜವಾಗಿಯೂ ಬೇಸರದ ಸಂಗತಿ. ಇಲ್ಲದಿದ್ದರೆ ಒಳ್ಳೆಯ ಪ್ರತಿಭೆಗಳಿಗೆ ಜೀವ ಕೊಡುವಂತಹ ಈ ಸ್ಪರ್ಧೆಯಲ್ಲಿ ಮುಂಬಯಿ ಕನ್ನಡಿಗರು ಭಾಗವಹಿಸದಿರುವದಕ್ಕೆ ನಾವೆಲ್ಲ ಯೋಚಿಸಬೇಕಾಗಿದೆ. ಕನ್ನಡ ಕಲಿತ ಮರಾಠಿ ಭಾಷಿಗರು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವಾಗ ಆ ಸ್ಫೂರ್ತಿ ನಮಗೇಕೆ ಇಲ್ಲ ಎಂದು ವೇದನೆ ವ್ಯಕ್ತಪಡಿಸಿದ ಮೋಹನ್ ಮಾರ್ನಾಡ್ ಮುಂದಿನ ದಿನಗಳಲ್ಲಾದರೂ ಇಲ್ಲಿ ಸಂಘ ಸಂಸ್ಥೆಗಳು ನಾಟಕ ತಂಡಗಳನ್ನು ಕಳುಹಿಸುವಂತಹ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಅವರು ನುಡಿದರು. ಅದರೊಂದಿಗೆ ಬೆಳೆಯುವ ಮಕ್ಕಳಿಗೆ ಎಳವೆಯಲ್ಲಿಯೇ ನಮ್ಮ ಕಲೆ, ಸಂಸ್ಕೃತಿ, ಸಾಹಿತ್ಯಗಳ ಆಸಕ್ತಿಗಳು ಮೈಗೂಡಿಸಿಕೊಳ್ಳುವಂತಹ ಕೆಲಸಗಳನ್ನು ಇಲ್ಲಿಯ ಸಂಘ ಸಂಸ್ಥೆಗಳು ಮಾಡಬೇಕು ಎಂದು ನುಡಿದ ಮಾರ್ನಾಡ್ ಇಂದು ನಾನು ಎಲ್ಲ ಕಲಾವಿದರ ಪರವಾಗಿ ಈ ಸ್ಪರ್ಧೆಯ ಉದ್ಘಾಟನೆಯನ್ನು ಮನತುಂಬಿ ಮಾಡಿದ್ದೇನೆ ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ಸಂಘದ ಅಧ್ಯಕ್ಷರಾದ ಎಂ. ಎಂ. ಕೋರಿಯವರು ಇಂತಹ ಅರ್ಥಪೂರ್ಣ ಸ್ಪರ್ಧೆಗಳಿಂದ ಒಂದಿಷ್ಟು ಪ್ರತಿಭೆಗಳು ಬೆಳಕಿಗೆ ಬರುತ್ತವೆ. ಹಾಗೂ ನಮ್ಮ ಕಲೆ, ಸಾಹಿತ್ಯ ಉಳಿಯುತ್ತದೆ. ಆ ನಿಟ್ಟಿನಲ್ಲಿ ಪ್ರತಿಯೊಬ್ಬರಲ್ಲಿಯೂ ಸ್ಪರ್ಧೆಯಲ್ಲಿ ಭಾಗವಹಿಸುವ ಛಲ ಇರಬೇಕು ಎಂದರು.

ಕರ್ನಾಟಕ ಸಂಘದ ಮಹಿಳಾವಿಭಾಗದ ಸುಶೀಲಾ ದೇವಾಡಿಗ ಮತ್ತು ಶೈಲಾ ಮೂರ್ತಿಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಂಘದ ಕೋಶಾಧಿಕಾರಿ ಬಿ.ಜಿ. ನಾಯಕ್ ಸ್ವಾಗತಿಸಿದರು. ಎಂ. ಎಂ. ಕೋರಿಯವರು ಮೋಹನ್ ಮಾರ್ನಾಡ್ ಅವರಿಗೆ ಪುಷ್ಪಗುಚ್ಛ, ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ವೇದಿಕೆಯಲ್ಲಿ ನಾವುಂದ ರಾಜು ಶ್ರೀಯಾನ್ ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷರಾದ ಭರತ್‌ಕುಮಾರ್ ಪೊಲಿಪು ಉದ್ಘಾಟಕರನ್ನು ಪರಿಚಯಿಸಿ ಕಾರ್ಯಕ್ರಮ ನಿರೂಪಿಸಿದರು.

ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ವಂದಿಸಿದರು.

### ಸಮಾರೋಪ ಸಮಾರಂಭ

ರಾಷ್ಟ್ರದಲ್ಲಿ ಕನ್ನಡ ನಾಟಕಗಳನ್ನೇ ಅತ್ಯುತ್ತಮ ನಾಟಕಗಳೆಂದು ಹೇಳಲಾಗುತ್ತದೆ. ನಾಟಕ ಕ್ಷೇತ್ರದಲ್ಲಿ ಜ್ಞಾನಪೀಠ ಪ್ರಶಸ್ತಿ ಬಂದಿದ್ದರೆ ಅದು ಕನ್ನಡದಲ್ಲೇ. ಕುವೆಂಪು ಅವರ ಜನ್ಮ ಶತಮಾನೋತ್ಸವದ ಈ ಸಂದರ್ಭದಲ್ಲಿ 9ನೆಯ ವರ್ಷದ ಕುವೆಂಪು ನಾಟಕ ಸ್ಪರ್ಧೆಯನ್ನು ಮುಗಿಸಿ ಮುಂದಿನ ವರ್ಷ ದಶಮಾನೋತ್ಸವ ಆಚರಿಸಲಿರುವ ಕರ್ನಾಟಕ ಸಂಘವು ಶ್ಲಾಘನೀಯವಾದುದು ಎಂದು ರಂಗತಜ್ಞ, ಈ ಮಾಸ ನಾಟಕದ ಸಂಪಾದಕ ಎಲ್. ಕೃಷ್ಣಪ್ಪ ಹೇಳಿದರು.

ಅತಿಥಿ ಶ್ರೀಕೃಷ್ಣಪರಿಸರ ಪ್ರೇಮಿ ಸಮಿತಿಯ ಸಂಸ್ಥಾಪಕರಾದ ಜಯಕೃಷ್ಣ ಶೆಟ್ಟಿಯವರು ನಾಟಕ ಸ್ಪರ್ಧೆಯ ನಾಟಕಗಳನ್ನು ಮೆಚ್ಚಿ ಕೊಳ್ಳುತ್ತಾ ಇಪ್ಪತ್ತೊಂದನೆಯ ಶತಮಾನದಲ್ಲೂ ಇಂತಹ ನಾಟಕಗಳಲ್ಲಿ ಆಸಕ್ತಿ ವಹಿಸವದು ಕಂಡಾಗ ಇದರ ಅವಶ್ಯಕತೆ ಹೆಚ್ಚೆಚ್ಚು ಗಮನಿಸಬೇಕು ಎಂದರು. ಅಧ್ಯಕ್ಷತೆ ವಹಿಸಿದ ಕರ್ನಾಟಕ ಸಂಘದ ಅಧ್ಯಕ್ಷ ಮನೋಹರ ಎಂ. ಕೋರಿಯವರು ಕರ್ನಾಟಕ ಸಂಘವು ವರ್ಷಪೂರ್ತಿ ಕನ್ನಡದ ಕುರಿತಂತೆ ಹಮ್ಮಿಕೊಳ್ಳುತ್ತಾ ಬಂದಿರುವ ಕಾರ್ಯಕ್ರಮಗಳನ್ನು ಸಭೆಯ ಮುಂದಿರಿಸಿದರು. ಸ್ಪರ್ಧೆಯ ತೀರ್ಪುಗಾರರಾಗಿರುವ ಸಾಹಿತಿ ವಿಶ್ವನಾಥ ಕಾರ್ನಾಡ್, ರಂಗತಜ್ಞ ಮಂಜುನಾಥಯ್ಯ ಮತ್ತು ಕಳ್ಳಿಗೆ ದಯಾಸಾಗರ್ ಚೌಟ ಅವರು ತಮ್ಮ ಅನಿಸಿಕೆಗಳನ್ನು ತಿಳಿಸುತ್ತಾ, ಉದ್ಘಾಟನೆಯ ದಿನ ಸ್ಪರ್ಧೆಯ ಉದ್ಘಾಟಕರಾದ ಮೋಹನ್ ಮಾರ್ನಾಡ್ ಹೇಳಿರುವ ಮಾತನ್ನು ಮತ್ತೆ ನೆನಪಿಸುತ್ತಾ ಮುಂಬಯಿ ನಾಟಕ ತಂಡಗಳು ಮುಂದಿನ ಬಾರಿ ಹೆಚ್ಚೆಚ್ಚು ಸಂಖ್ಯೆಲ್ಲಿ ಭಾಗವಹಿಸುವಂತಾಗಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಸ್ಪರ್ಧೆಯ ವಿಜೇತರಿಗೆ ಎಲ್. ಕೃಷ್ಣಪ್ಪ, ಜಯಕೃಷ್ಣ ಶೆಟ್ಟಿ ಮತ್ತು ಎಂ. ಎಂ. ಕೋರಿಯವರು ಬಹುಮಾನಗಳನ್ನು ವಿತರಿಸಿದರು. ಸ್ಪರ್ಧೆಯಲ್ಲಿ ಅತ್ಯುತ್ತಮ ನಾಟಕ ನಟನ (ರಿ) ಮೈಸೂರು ಅವರ 'ತುಂಟ ರಾಬಿನ್' (ಪ್ರಥಮ), ನಾಟ್ಯ ದರ್ಪಣ, ಬೆಂಗಳೂರು ಅವರ 'ಹೆಜ್ಜೆಗಳು' (ದ್ವಿತೀಯ), ಸೃಷ್ಟಿ, ಚೆನ್ನರಾಯಪಟ್ಟಣ ಅವರ 'ಊರು ಭಂಗ' (ತೃತೀಯ)

No. TECH/47-202/MBI/2003-05
Date of Posting : 10-02-2005

ಸ್ಥಾನ ಪಡೆದು ಪ್ರಶಸ್ತಿ ಗಳಿಸಿತು. ಹೊರನಾಡ ಉತ್ತಮ ನಾಟಕವೆಂದು ಬಿ.ಎಸ್.ಕೆ.ಬಿ. ಎಸೋಸಿಯೇಷನ್, ಮುಂಬಯಿ ತಂಡವು 'ಯಲ್ಲಮ್ಮ' ನಾಟಕವು ಪಡೆಯಿತು.

## ದೇವರನ್ನು ತಿಳಿದು ಕಾಣುವುದು ಮುಖ್ಯ : ಅಂಬಾತನಯ ಮುದ್ರಾಡಿ

ವೇದ ಉಪನಿಷತ್‌ಗಳು ಒಪ್ಪುವ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಸುವಲ್ಲಿ ಪುರಾಣಗಳು ಬಹುಮುಖ್ಯ ಪಾತ್ರವಹಿಸುತ್ತವೆ. ದೇವರನ್ನು ಕಾಣುವುದು ಮುಖ್ಯ ಎಂದು ಖ್ಯಾತ ವಿದ್ವಾಂಸರಾದ ಅಂಬಾತನಯ ಮುದ್ರಾಡಿ ಅವರು ಅಭಿಪ್ರಾಯ ಪಟ್ಟರು.

ಅವರು ಇತ್ತೀಚೆಗೆ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಆಯೋಜಿಸಿದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ''ಪುರಾಣಾಂತರ್ಗತ ತತ್ವ ವಿಚಾರಗಳು'' ಎನ್ನುವ ವಿಷಯದ ಮೇಲೆ ಉಪನ್ಯಾಸ ನೀಡುತ್ತ, ಪುರಾಣದ ಮೂರು ಕತೆಗಳ ಹಿನ್ನಲೆಯಲ್ಲಿ ಪುರಾಣ ಕಥೆಗಳಲ್ಲಿ ಅಡಕವಾಗಿರುವ ತತ್ವವಿಚಾರಗಳು ವಾಸ್ತವ ಬದುಕಿಗೆ ಹೇಗೆ ಹತ್ತಿರವಾಗಿದೆ ಎಂಬುದನ್ನು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಸಂಜೀವ ಶೆಟ್ಟಿಯವರು ವಹಿಸಿದ್ದರು. ಪ್ರಾಸ್ತಾವಿಕವಾಗಿ ವಿಭಾಗದ ಮುಖ್ಯಸ್ಥರಾದ ಡಾ. ತಾಳ್ತಜೆ ವಸಂತಕುಮಾರರು ಮಾತನಾಡಿದರು. ವೇದಿಕೆಯಲ್ಲಿ ಡಾ. ಕೆ. ರಘುನಾಥ ಉಪಸ್ಥಿತರಿದ್ದರು. ಸ್ವಾಗತ ಗೀತೆಯನ್ನು ಮಲ್ಲಿಕಾ ರಾವ್, ರಾಜಶ್ರೀ ಇನಾಮದಾರ್ ಹಾಡಿದರು, ಮಹೇಶ ಹೆಗ್ಡೆ ವಂದಿಸಿದರು.

## ಮಾನವ್ಯ ಕವಿ ಬಿ.ಎ. ಸನದಿಯವರಿಗೆ ಗೌ. ಡಾಕ್ಟರೇಟ್



ಕರ್ನಾಟಕ ಸಂಘ ಮುಂಬಯಿಯ ಮಾಜಿ ಕಾರ್ಯಾಧ್ಯಕ್ಷ ಹಾಗೂ ವಿಶ್ವಸ್ತ ಮಂಡಳಿಯ ಮಾಜಿ ಉಪಾಧ್ಯಕ್ಷರಾಗಿದ್ದ ಕನ್ನಡದ ಖ್ಯಾತ ಕವಿ ಬಿ.ಎ. ಸನದಿಯವರನ್ನು ಕರ್ನಾಟಕ ವಿಶ್ವವಿದ್ಯಾಲಯವು ಈ ಬಾರಿಯ ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಿದ್ದಕ್ಕೆ ಕರ್ನಾಟಕ ಸಂಘ ಮುಂಬಯಿಯ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಸಿಬಂಧಿಗಳು ಹರ್ಷ ವ್ಯಕ್ತ ಪಡಿಸಿದ್ದಾರೆ. ಮುಂಬಯಿ ಕನ್ನಡಿಗರಿಗೆ ಇದು ಹೆಮ್ಮೆಯ ವಿಷಯ.

ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದು ಸಂಘದ ಕಾರ್ಯಕ್ರಮಗಳು ಸುಲಲಿತವಾಗಿ ನಡೆಯಲು ಮಾರ್ಗದರ್ಶನ ನೀಡುತ್ತಿದ್ದ ಬಿ.ಎ. ಸನದಿಯವರು ಸದ್ಯ ಕುಮಟಾದಲ್ಲಿ ಸ್ಥಾಯಿಕರಾಗಿದ್ದಾರೆ.

ಧಾರವಾಡದಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯ ಸಿಂಡಿಕೇಟ್ ಸಭೆಯು ಹಿರಿಯ ಸಾಹಿತಿಗಳಾದ ಎನ್. ಕೆ. ಕುಲಕರ್ಣಿ, ಬಿ.ಎ. ಸನದಿ ಮತ್ತು ಚೆನ್ನವೀರ ಕಣವಿಯವರಿಗೆ ಡಾಕ್ಟರೇಟ್ ನೀಡಲು ನಿರ್ಧರಿಸಿದೆ.

ಸಮಸ್ತ ಮುಂಬಯಿ ಕನ್ನಡಿಗರ ಪರವಾಗಿ ಬಿ.ಎ. ಸನದಿ, ಎನ್.ಕೆ. ಕುಲಕರ್ಣಿ ಮತ್ತು ಚೆನ್ನವೀರ ಕಣವಿಯವರಿಗೆ ಹಾರ್ದಿಕ ಅಭಿನಂದನೆಗಳನ್ನು 'ನೇಸರು' ಸಲ್ಲಿಸುತ್ತದೆ.

## ಮುಂಬಯಿ ವಿ.ವಿ.ಯ ಕನ್ನಡ ವಿಭಾಗದ ಕಾರ್ಯಕ್ರಮಗಳು

### ಕವಿಗೋಷ್ಠಿ

ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ತನ್ನ ಬೆಳ್ಳಿಹಬ್ಬದ ಕಾರ್ಯಕ್ರಮಗಳ ಅಂಗವಾಗಿ ಕವಿ ಸಮ್ಮೇಳನವೊಂದನ್ನು ಆಯೋಜಿಸಿತ್ತು. ಇಪ್ಪತ್ತೈದು ಮಂದಿ ಕವಿಗಳು ಭಾಗವಹಿಸಿದ್ದ ಇದನ್ನು ಶ್ರೀ ಕಜೆ ಈಶ್ವರ ಭಟ್ ಇವರು ಉದ್ಘಾಟಿಸಿದರು. ''ಮುಂಬಯಿಯಂಥ ಮಹಾನಗರದಲ್ಲಿ, ವಿಭಾಗವು ಮಾಡುತ್ತ ಬಂದಿರುವ ಕನ್ನಡ ಕೆಲಸಗಳು ಪ್ರಶಂಸನೀಯವಾಗಿವೆ. ಮುಂಬರುವ ವರ್ಷಗಳಲ್ಲಿ ಅದು ಮತ್ತಷ್ಟು ಪ್ರವರ್ಧಮಾನವಾಗಲಿ'' ಎಂದು ಅವರು ತಮ್ಮ ಭಾಷಣದಲ್ಲಿ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಸುನೀತಾ ಶೆಟ್ಟಿ ಅವರು ''ನೆಲ - ಮುಗಿಲುಗಳ ಸಂದರ್ಭದಲ್ಲಿ, ಕವಿಯಾದವನು ನೆಲಕ್ಕೇ ಆದ್ಯತೆಯನ್ನು ನೀಡಬೇಕು. ನೆಲದ ಮಧುರವಾದ ಬಂಧವು ಜೀವಪ್ರೀತಿಯಲ್ಲಿ ಅಭಿವ್ಯಕ್ತಿಯನ್ನು ಪಡೆಯುವಂತೆ ಕಾವ್ಯವು ಮಾಡುತ್ತದೆ. ಅಮೂರ್ತದಿಂದ ಮೂರ್ತಕ್ಕೆ ಸಾಗುವ ಅದ್ಭುತವು ಕಾವ್ಯದಿಂದ ಸ್ಥಾಪಿತವಾಗುತ್ತದೆ'' ಎಂದು ಅಭಿಪ್ರಾಯಪಟ್ಟರು.

ಡಾ. ತಾಳ್ತಜೆ ವಸಂತಕುಮಾರ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ವಿಭಾಗವು ವರ್ಷದುದ್ದಕ್ಕೂ ಹಮ್ಮಿಕೊಳ್ಳಲಿರುವ ಕಾರ್ಯಕ್ರಮಗಳ ನೀಲನಕ್ಷೆಯನ್ನು ಪ್ರಸ್ತುತ ಪಡಿಸಿದರು.

### ಸಾಹಿತ್ಯ ಸಂವಾದ

''ನಮ್ಮ ಪರಂಪರೆಯನ್ನು ಉಳಿಸುವುದು ಎಂದರೆ ಹಳತರೊಂದಿಗೆ ಹೊಸತನ್ನು ಸೇರಿಸಿಕೊಳ್ಳುವುದೇ ಆಗಿದೆ. ಮೂಲಭೂತವಾಗಿ, ಅದರ ಬಗೆಗಿನ ಅರಿವನ್ನು ಬೆಳೆಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ'' ಎಂದು ಮದರಾಸು ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ ಅವರು ಅಭಿಪ್ರಾಯ ಪಟ್ಟರು.

ವಿಭಾಗವು ಏರ್ಪಡಿಸಿದ್ದ 'ಸಾಹಿತ್ಯ ಸಂವಾದ' ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತ, ಪ್ರಶ್ನೋತ್ತರದಲ್ಲೂ ಭಾಗವಹಿಸಿದರು. ಜೈಮಿನಿ ಭಾರತದ ಕೆಲವು ಭಾಗಗಳನ್ನೂ ಅವರು ಈ ಸಂದರ್ಭದಲ್ಲಿ ಸುಶ್ರಾವ್ಯವಾಗಿ ಹಾಡಿದರು.

## ಕುಲಾಲ ಸಂಘ ಮುಂಬಯಿ

### ರಂಜಿಸಿದ ನಾಚೆ ಮಯೂರಿ - ರಸಮಂಜರಿ ಕಾರ್ಯಕ್ರಮ



ಇತ್ತೀಚೆಗೆ ಕುಲಾಲ ಭವನ ಮತ್ತು ಸಾಂಸ್ಕೃತಿಕ ಕೇಂದ್ರದ ಕಟ್ಟಡ ನಿಧಿ ಸಹಾಯಾರ್ಥವಾಗಿ ಷಣ್ಮುಖಾನಂದ ಸಭಾಗೃಹದಲ್ಲಿ ಚಿತ್ರನಟಿ ಸುಧಾ ಚಂದ್ರನ್‌ರವರ ನೇತೃತ್ವದಲ್ಲಿ 'ನಾಚೆ ಮಯೂರಿ ನೈಟ್' ರಸಮಂಜರಿ ಕಾರ್ಯಕ್ರಮ ನಡೆಯಿತು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಂಟರ ಸಂಘದ ಅಧ್ಯಕ್ಷ ಸುಧಾಕರ ಹೆಗ್ಡೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಜಯಕೃಷ್ಣ ಶೆಟ್ಟಿ ಹಾಗೂ ಗೌರವ ಅತಿಥಿಯಾಗಿ ದೇವಾಡಿಗ ಸಂಘ, ಮುಂಬಯಿ ಇದರ ಅಧ್ಯಕ್ಷ ಧರ್ಮಪಾಲ ದೇವಾಡಿಗ ಆಗಮಿಸಿದ್ದರು.

ಸಂಘದ ಅಧ್ಯಕ್ಷ ಪಿ.ಕೆ. ಸಾಲ್ಯಾನ್ ಅತಿಥಿಗಳನ್ನು ಸ್ವಾಗತಿಸಿದರು. ಸಂಘದ ಮಾಜಿ ಅಧ್ಯಕ್ಷ ಡಾ. ಎಚ್. ಎಂ. ಸುಬ್ಬಯ್ಯ ಅವರು ಸಂಘವು ಬೆಳೆದು ಬಂದ ದಾರಿಯನ್ನು ವಿವರಿಸಿದರು. ಇತರ ಅನೇಕ ಅತಿಥಿ ಮಹೋದಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಿಕ್ಕಿರಿದು ನೆರೆದ ಸಭಾಗೃಹದಲ್ಲಿ ಸಂಘದ ಮಹಿಳಾ ಸದಸ್ಯರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಮಹಿಳಾ ವಿಭಾಗದ ಅಧ್ಯಕ್ಷೆ ವನಿತಾ ಬಂಜನ್ ಕಾರ್ಯಕ್ರಮ ನಿರೂಪಿಸಿದರೆ, ಕಾರ್ಯದರ್ಶಿ ಪಿ. ದೇವ್‌ದಾಸ್ ಎಲ್. ಕುಲಾಲ್ ವಂದಿಸಿದರು.

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647 ● Fax : 2401 0574
Email : karunadu@bom5.vsnl.net.in
Printed at Aarati Art Printers, Fort, Mumbai-400 001. * 2266 3361 / 2266 5938